
# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಫೆಬ್ರವರಿ-2014
ಬೆಲೆ ರೂ. 1


# ದೆಹಲಿಯಲ್ಲಿ ಮೈಸೂರಿನ ಹುಲಿ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 24 ಸಂಚಿಕೆ 5
ಫೆಬ್ರವರಿ 2014, ಬೆಲೆ ರೂ. 1

**ಅಭಿಮತ ಸಂಪಾದಕ ಮಂಡಳ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷ
ವಸಂತ ಶೆಟ್ಟಿ ಬೆಳ್ಳಾರೆ: 9958697823

ಉಪಾಧ್ಯಕ್ಷರು
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

ಪ್ರಧಾನ ಕಾರ್ಯದರ್ಶಿ
ಸಿ.ಎಂ.ನಾಗರಾಜ: 9811325440

ಕೋಶಾಧಿಕಾರಿ
ಡಾ. ಅವನೀಂದ್ರನಾಥ್ ರಾವ್ 9868123382

ಜಂಟಿ ಕಾರ್ಯದರ್ಶಿಗಳು
ಎಸ್.ಸಿ. ಹೇಮಲತಾ: 9971121636
ಟಿ.ಎಂ. ಮೈಲಾರಪ್ಪ: 9868347461

ಸಮಿತಿ ಸದಸ್ಯರು
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂರ್ಣಿಮಾ ಗೌಡ: 8860916899
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

ವಿಶೇಷ ಆಹ್ವಾನಿತರು
ಐ. ರಾಮ ಮೋಹನ್ ರಾವ್
ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಅರವಿಂದ ಕೌಜಲಗಿ

## ನೇರ ಮಾತು

ಇದು ಒಂದು ದಶಕಕ್ಕಿಂತಲೂ ಹಿಂದಿನ ಸಂದರ್ಭ. ದೆಹಲಿ ಕರ್ನಾಟಕ ಸಂಘದ ಇತಿಹಾಸದಲ್ಲಿಯೇ ಮಹತ್ತರವಾದ ನಿರ್ಣಯವನ್ನು ಸರ್ವ ಸದಸ್ಯರ ಅನುಮೋದನೆಯೊಂದಿಗೆ ಅಂದಿನ ಅಧ್ಯಕ್ಷ ಕೆ.ಆರ್. ನಾಗರಾಜ್ ಅವರು ತೆಗೆದುಕೊಂಡಿದ್ದರು. ಅವರು ಹಿರಿಯರಾದ ಐ. ರಾಮಮೋಹನ್ ರಾವ್ ಮತ್ತು ಕಿರಿಯರಾದ ಸರವು ಕೃಷ್ಣ ಭಟ್‌ರನ್ನು ತಮ್ಮ ಎಡಬಲಗಳಲ್ಲಿರಿಸಿ ಸಂಘದ ಹಳೆಯ ಕಟ್ಟಡವನ್ನು ಕೆಡವಿ ಹೊಸ ಆಧುನಿಕ ಸಾಂಸ್ಕೃತಿಕ ಸಮುಚ್ಚಯವನ್ನು ನಿರ್ಮಿಸಲು ಆರಂಭಿಸಿದರು. ನೆಲಸಮವಾದ ಹಳೆಯ ಕಟ್ಟಡ ಮತ್ತು ಹೊಸದಾಗಿ ಗುದ್ದಲಿಪೂಜೆ ನಡೆದು ಅಡಿಪಾಯ ಹಾಕಿ ಇನ್ನೂ ಕನಸಾಗಿದ್ದ ಹೊಸ ಕಟ್ಟಡದ ಕೆಲಸ, ಸಂಘದ ಇತಿಹಾಸ ಮತ್ತು ಭವಿಷ್ಯದ ಪ್ರತಿಮೆಯಂತೆ ನಿಂತಿತ್ತು.

ಫೆಬ್ರವರಿ 2004. ಪ್ರಜಾಸತ್ತಾತ್ಮಕವಾಗಿ ನಡೆದ ದೆಹಲಿ ಕರ್ನಾಟಕ ಸಂಘದ ಚುನಾವಣೆಯಲ್ಲಿ ಆಡಳಿತದ ಚುಕ್ಕಾಣಿಯನ್ನು ಹಿಡಿಯಲು ಹೊಸತೊಂದು ತಂಡವನ್ನು ಸರ್ವಸದಸ್ಯರು ಆರಿಸಿದರು. ಹೊಸ ತಂಡದ ಕಾರ್ಯವನ್ನು ಇನ್ನೂ ಕಾಣದಿದ್ದ ನಾಗರಾಜರು ಸೇರಿದಂತೆ ಸಂಘದ ಏಳ್ಗೆಯ ಕುರಿತು ಕಾಳಜಿಯಿದ್ದ ಬಹಳಷ್ಟು ಮಂದಿ ಸಂಘದ ಕಟ್ಟಡದ ಕೆಲಸ, ಅದಕ್ಕಾಗಿ ಹೊಂದಿಸಬೇಕಾದ ಬೃಹತ್ ಆರ್ಥಿಕ ಸಂಪನ್ಮೂಲದ ಕುರಿತು ನಿಜವಾಗಿಯೂ ಚಿಂತೆಗೀಡಾಗಿದ್ದರು. ಸಾಂಸ್ಕೃತಿಕ ಸಮುಚ್ಚಯದ ಕನಸು ನುಚ್ಚು ನೂರಾಯಿತೋ ಎಂದಿದ್ದರು.

ಡಾ. ಪುರುಷೋತ್ತಮ ಬಿಳಿಮಲೆಯವರು ಸಂಘದ ಅಧ್ಯಕ್ಷರಾಗಿ, ಕೃಷ್ಣ ಭಟ್ ಕಾಯದರ್ಶಿಯಾಗಿ ಮತ್ತು ಪದಾಧಿಕಾರಿಗಳಾಗಿದ್ದ ಎಸ್.ಜಿ. ಹೆಗಡೆ, ಪ್ರಭಾ ಮೂರ್ತಿ, ಬಿ.ಪಿ.ಉತ್ತಪ್ಪ, ಸಿ.ಎಂ. ನಾಗರಾಜ್, ಲತಾ ಇದ್ಯರ ಜತೆಗೆ ನನ್ನನ್ನೂ ಸೇರಿದಂತೆ ಒಂದು ಯುವ ತಂಡ 22 ಫೆಬ್ರವರಿ 2004ರಂದು ಅಧಿಕಾರ ವಹಿಸಿ ಹೊಸ ಇತಿಹಾಸವನ್ನು ಬರೆಯಲು ಹೊರಟಿತ್ತು. ಡಾ. ಬಿಳಿಮಲೆಯವರು ಸಂಘದ ಚಟುವಟಿಕೆಗಳಲ್ಲಿ ಪಾರದರ್ಶಕತೆ, ಮುಕ್ತತೆ ಮತ್ತು ಸೃಜನಾತ್ಮಕವಾದ ಆಂತರಿಕ ವಿಮರ್ಶೆಗಳತ್ತ ಹೆಚ್ಚು ಒತ್ತು ಕೊಟ್ಟು ಕೆಲಸ ಕಾರ್ಯಕ್ಕೆ ಚಾಲನೆ ನೀಡಿದರು. ಆ ಸಂದರ್ಭದಲ್ಲಿ ಕರ್ನಾಟಕ ಸರಕಾರದ ಅನುದಾನದ ಐವತ್ತು ಲಕ್ಷ ರೂಪಾಯಿ ಸೇರಿ ಸಂಘದಲ್ಲಿ ಒಟ್ಟು ಒಂದು ಕೋಟಿ ಎಪ್ಪತ್ಮೂರು ಲಕ್ಷ ರೂಪಾಯಿ ಮಾತ್ರವಿತ್ತು. ಸುಮಾರು ಏಳು ಕೋಟಿ ರೂಪಾಯಿ ನಿರ್ಮಾಣವೆಚ್ಚದ ಸಮುಚ್ಚಯಕ್ಕೆ ಇನ್ನುಳಿದ ಐದು ಕೋಟಿ ರೂಪಾಯಿಯನ್ನು ತರಬೇಕಿತ್ತು. ಮುಂದೆ ವರ್ಷದೊಳಗೆ ಅಂದರೆ, 13 ಫೆಬ್ರವರಿ 2005ರಂದು ನಿರ್ಮಾಣ ಕಾರ್ಯ ಮುಗಿದು ಹಿರೇಮಗಳೂರು ಕಣ್ಣನ್ ಅವರ ನೇತೃತ್ವದಲ್ಲಿ ಕನ್ನಡನುಡಿಪೂಜೆಯೊಂದಿಗೆ ಸಾಂಸ್ಕೃತಿಕ ಸಮುಚ್ಚಯದ ಕಾರ್ಯಾರಂಭವಾದುದು ನಿಜಕ್ಕೂ ಪವಾಡವೇ! ಇದು ಸಾಧ್ಯವಾದದ್ದು ಒಂದೇ ರೀತಿಯ ಧ್ಯೇಯ, ಉದ್ದೇಶವನ್ನು ಹೊಂದಿದ್ದ ತಂಡದಿಂದಾಗಿ ಮಾತ್ರ.

ಒಂದು ವರ್ಷದ ತ್ವರಿತ ಅವಧಿಯಲ್ಲಿ ಬೃಹತ್ ಸಾಂಸ್ಕೃತಿಕ ಸಮುಚ್ಚಯವೊಂದನ್ನು ನಿರ್ಮಿಸಲಾಯಿತು. ಏಳು ಕೋಟಿ ರೂಪಾಯಿಗಳ ವ್ಯವಹಾರ ನಡೆಯಿತು. ಆದರೆ ಎಲ್ಲವೂ ಪಾರದರ್ಶಕ. ಯಾವುದೇ ಖರ್ಚುವೆಚ್ಚಗಳ ಬಗ್ಗೆ ತಕರಾರು ಎತ್ತುವಂತಹ ಸಂದರ್ಭ ನಿರ್ಮಾಣವಾಗಲಿಲ್ಲ. ಮಾಡಿದ ಕೆಲಸಗಳಲ್ಲಿ ದ್ವಂದ್ವ ಅಭಿಪ್ರಾಯವಿರಲಿಲ್ಲ. ಎಲ್ಲರ ಮನಸ್ಸನ್ನು ಗೆದ್ದು, ಕನ್ನಡಕ್ಕಾಗಿ ಶಕ್ತಿ ಮೀರಿ ದುಡಿದ ಈ ತಂಡದ ಜೊತೆಗೆ, ನೂರಾರು ಕನ್ನಡಿಗರು ಕೈ ಜೋಡಿಸಿದರು. ನಿಸ್ವಾರ್ಥ ಸೇವೆ ಮಾಡಿದರು. ಸಮುಚ್ಚಯಕ್ಕೆ ಈಗ ಒಂಭತ್ತು ವರ್ಷಗಳು ಪೂರೈಸಿ ಹತ್ತನೇಯ ವರ್ಷಕ್ಕೆ ಕಾಲಿಟ್ಟಿದೆ. ಇದನ್ನು ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವ ಸಾಂಸ್ಕೃತಿಕ ವರ್ಷವಾಗಿ ಆಚರಿಸಲಾಗುತ್ತದೆ.

ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವುದಕ್ಕೆ ಅಂದಿನ ಸಮಿತಿ ಒಂದು ಮಾದರಿಯಾಗಿತ್ತು. ತಂಡಕ್ಕೆ ಕೊಡುಗೆ ನೀಡುವ ಮತ್ತು ಸದಾಶಯ ಹೊಂದಿರುವ ಸದಸ್ಯರು ಇದ್ದಾಗ ಅಸಾಧ್ಯವನ್ನು ಸಾಧ್ಯವಾಗಿಸುವ ಶಕ್ತಿ ಬರುತ್ತದೆ. ದಶಮಾನೋತ್ಸವವನ್ನು ಆಚರಿಸುವ ಈ ಸಂದರ್ಭದಲ್ಲಿ ಅಂತಹ ಒಂದು ಉತ್ತಮ ಕಾರ್ಯಕಾರಿ ಸಮಿತಿ ಸಂಘಕ್ಕೆ ಲಭಿಸಿದೆ. ಈ ದಶಮಾನೋತ್ಸವ ವರ್ಷವನ್ನು ಸಂಭ್ರಮದೊಂದಿಗೆ ಅರ್ಥಪೂರ್ಣವಾಗಿ ಆಚರಿಸೋಣ. ಗೌರವಾನ್ವಿತ ಸರ್ವ ಸದಸ್ಯರ ಸಕ್ರಿಯ ಭಾಗವಿಸುವಿಕೆ ನಮ್ಮೊಂದಿಗಿರಲಿ. ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ಮುನ್ನೋಟ

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ದೆಹಲಿ ಕರ್ನಾಟಕ ಸಂಘಕ್ಕೆ ಇದೀಗ 20 ಲಕ್ಷ ರೂಪಾಯಿ ಅನುದಾನ ಬಿಡುಗಡೆಯಾಗಿದೆ. ಸರಕಾರದ ಕ್ರಿಯಾ ಯೋಜನೆಯಡಿ ಇದನ್ನು ನೀಡಲಾಗಿದೆ. ಈ ವಿಷಯವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಸಂತೋಷವಾಗುತ್ತಿದೆ.

ಸಂಘದ ಹಣಕಾಸಿನ ಸಮರ್ಥ ನಿರ್ವಹಣೆ, ದೆಹಲಿಯಲ್ಲಿ ಕನ್ನಡ ನುಡಿ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ನಡೆಸುತ್ತಿರುವ ಕಾರ್ಯಕ್ರಮಗಳು ಮತ್ತು ಸಂಘವನ್ನು ದೆಹಲಿಯಲ್ಲಿ ಒಂದು ಸಾಂಸ್ಕೃತಿಕ ಕೇಂದ್ರವನ್ನಾಗಿಸಲು ಹಿರಿಯರ ಮಾರ್ಗದರ್ಶನಕ್ಕೆ ದೊರೆತ ಫಲ ಇದು. ರಾಜ್ಯ ಸರಕಾರ ನೀಡಿದ ಈ ಧನ ಸಹಾಯ ಮುಂಬರುವ ಸಾಂಸ್ಕೃತಿಕ ಕಾರ್ಯ ಯೋಜನೆಗಳಿಗೆ ಪ್ರೋತ್ಸಾಹ ನೀಡಿದಂತಾಗಿದೆ. ಸೂಕ್ತ ಕಾಲದಲ್ಲಿ ಹಣ ಬಿಡುಗಡೆಯಾಗಲು ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ಸಚಿವೆ ಶ್ರೀಮತಿ ಉಮಾಶ್ರೀಯವರಿಗೆ ಹಾಗೂ ಅಧಿಕಾರಿಗಳಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಜತೆಗೆ ಕಳೆದ ಸರ್ವ ಸದಸ್ಯರ ಮಹಾಸಭೆಯಲ್ಲಿ ನಾವು ನೀಡಿದ ಭರವಸೆಯ ಮೇಲೆ ವಿಶ್ವಾಸವಿಟ್ಟು ಸಹಕರಿಸಿದ ಸಂಘದ ಎಲ್ಲಾ ಸದಸ್ಯರಿಗೂ ನಾವು ಅಭಾರಿ.

ಕರ್ನಾಟಕ ಸರಕಾರವು ದೆಹಲಿ ಕರ್ನಾಟಕ ಸಂಘಕ್ಕೆ ಅನುದಾನ ನೀಡಿದಂತೆ ಇಲ್ಲಿನ ಇತರ ಕನ್ನಡ ಸಂಘ ಸಂಸ್ಥೆಗಳಿಗೂ ಕೋರಿಕೆ ಮೇರೆಗೆ ದೆಹಲಿಯಲ್ಲಿರುವ ಕನ್ನಡಿಗರಿಗೆ ಸಹಾಯವಾಗುವಂತೆ ಅನುದಾನ ನೀಡುತ್ತಿದೆ. ಇಂತಹ ಅನುದಾನವನ್ನು, ನೀಡಿದ ಉದ್ದೇಶಕ್ಕೆ ಬಳಸಿ ಕನ್ನಡಿಗರ ಮತ್ತು ಕರ್ನಾಟಕ ಸಂಸ್ಕೃತಿಯ ಬೆಳವಣಿಗೆಯನ್ನು ನೋಡಿಕೊಳ್ಳುವುದು ನಮ್ಮ ಜವಾಬ್ದಾರಿಯಾಗುತ್ತದೆ. ಅನುದಾನವು ಸದುಪಯೋಗವಾಗದಿದ್ದಾಗ ಅದನ್ನು ನೀಡಿದ ಸರಕಾರವು ದೆಹಲಿಯಲ್ಲಿರುವ ಎಲ್ಲಾ ಕನ್ನಡಪರ ಸಂಘ ಸಂಸ್ಥೆಗಳ ಕುರಿತು ವಿಶ್ವಾಸದಿಂದ ನೋಡುವುದಿಲ್ಲ. ಹಾಗಾಗಿ ಸರಕಾರವು ನೀಡಿದ ಈ ಅನುದಾನವನ್ನು ಬಹಳಷ್ಟು ಜಾಗ್ರತೆಯಿಂದ, ಇಲ್ಲಿನ ಕನ್ನಡಿಗರ ಮತ್ತು ಕರ್ನಾಟಕ ಸಂಸ್ಕೃತಿಯ ಬೆಳವಣಿಗೆಗೆ ಉಪಯೋಗಿಸುವ ಬೃಹತ್ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಸಂಘದ ಚಟುವಟಿಕೆಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಈಗಿರುವ ಸದಸ್ಯರ ಜತೆಗೆ ಯುವಕರು ಮತ್ತು ಹೊಸದಾಗಿ ದೆಹಲಿಗೆ ಬಂದವರು ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮೆಲ್ಲರ ಆಶಯ. ಅದಕ್ಕಾಗಿಯೇ ಯುವಕರಿಗೆ ಮತ್ತು ಮಹಿಳೆಯರಿಗೆ ಹೆಚ್ಚು ಅವಕಾಶವಿರುವ ಕಾರ್ಯಕ್ರಮಗಳನ್ನು ಮುಂದಿನ ತಿಂಗಳು ಹಮ್ಮಿಕೊಳ್ಳಲಾಗಿದೆ. ನೀವೆಲ್ಲರೂ ನಮ್ಮ ಜತೆಗಿರುವಿರಿ ಎಂದು ಕೊಂಡಿದ್ದೇನೆ. ಅ

*ಸಿ.ಎಂ.ನಾಗರಾಜ, ಪ್ರಧಾನ ಕಾರ್ಯದರ್ಶಿ*

ದೆಹಲಿ ಕರ್ನಾಟಕ ಸಂಘದಲ್ಲಿ

# ತಿಂಗಳ ಕಾರ್ಯಕ್ರಮ

## 16 ಫೆಬ್ರವರಿ 2014

**ಭಾನುವಾರ ಅಪರಾಹ್ನ 2.00 ಗಂಟೆಗೆ**

ಕರ್ನಾಟಕ ಸರ್ಕಾರ, ವಾರ್ತಾ ಇಲಾಖೆ, ಕರ್ನಾಟಕ ವಾರ್ತಾಕೇಂದ್ರ, ನವದೆಹಲಿ ಹಾಗೂ ದೆಹಲಿ ಕರ್ನಾಟಕ ಸಂಘ, ನವದೆಹಲಿ ಇವರ ಸಂಯುಕ್ತ ಆಶ್ರಯದಲ್ಲಿ ಲಿಖಿತ್ ಶೆಟ್ಟಿ, ರಮ್ಯ ಬರ್ನ, ನವೀನ್ ಡಿ.ಪಡೀಲ್, ಅರವಿಂದ ಬೋಳಾರ್ ಮತ್ತು ರೇಖಾದಾಸ್ ಅಭಿನಯದ **ತುಳು ಚಲನಚಿತ್ರ: ಒರಿಯರ್ದೊರಿ ಅಸಲ್**

**ಭಾನುವಾರ ಸಂಜೆ 5.00 ಗಂಟೆಗೆ**

**ಅಕ್ಕ ಹೆಜ್ಜೆ ಗುರುತುಗಳು –ಕಿರು ಚಿತ್ರ ಪ್ರದರ್ಶನ**
(ನಿರ್ದೇಶನ–ನಿರ್ಮಲಾ ಸಿ. ಯಲಿಗಾರ್)
**ಅಕ್ಕ ಮಹಾದೇವಿ ಅವರ ಕುರಿತು ಉಪನ್ಯಾಸ**
ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಕರ್ನಾಟಕದ ಮಾಜಿ ಸಚಿವೆ ಮತ್ತು ಅಕ್ಕ ಮಹಾದೇವಿ ಸಮಿತಿ, ಉಡುತಡಿ.

**ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ**

**ಶ್ರೀ ಎಸ್.ಕೆ.ಕುಲಕರ್ಣಿ** ಅವರಿಗೆ
ಹಾಗೂ **ವಿದ್ಯಾರ್ಥಿ ವೇತನ ವಿತರಣೆ**

## 28 ಫೆಬ್ರವರಿ 2014


**ಸಂಜೆ 6.00 ಗಂಟೆಗೆ**

**ಹರಿಕಥಾ ಕೀರ್ತನ: ಪ್ರಹ್ಲಾದ ಚರಿತ್ರೆ**
**ವಿದ್ವಾನ್ ಶಂಕರ್ ಭಟ್, ಸ್ವರ್ಣವಳ್ಳಿ ಹಾಗೂ ಸಂಗಡಿಗರಿಂದ**

## 7,8 ಮತ್ತು 9 ಮಾರ್ಚ್ 2014

**ಶನಿವಾರ ಸಂಜೆ : 3.00 ಗಂಟೆಗೆ**

**ದೇವದಾಸ ಶೆಟ್ಟಿ** ಅವರಿಂದ
ದೆಹಲಿ ಕರ್ನಾಟಕ ಸಂಘದ
ಆರ್ಟ್ ಗ್ಯಾಲರಿಯಲ್ಲಿ
**ಚಿತ್ರಕಲಾ ಪ್ರದರ್ಶನ**



## 12 ಮಾರ್ಚ್ 2014

**ಭಾನುವಾರ ಸಂಜೆ 3.00 ಗಂಟೆಗೆ**

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ
**ಡಾ. ಸಿ.ಎನ್. ರಾಮಚಂದ್ರನ್** ಅವರಿಗೆ **ಅಭಿನಂದನೆ**

**ಭಾನುವಾರ ಸಂಜೆ 4.00 ಗಂಟೆಗೆ**

ದೆಹಲಿ ಕರ್ನಾಟಕ ಸಂಘ ಮತ್ತು ಡಾ. ವಿ.ಕೃ. ಗೋಕಾಕ್ ನ್ಯಾಶನಲ್ ಟ್ರಸ್ಟ್, ಹಾವೇರಿ ಇದರ ಸಹಯೋಗದೊಂದಿಗೆ
**ಡಾ. ವಿ.ಕೆ. ಗೋಕಾಕ್–ಒಂದು ಸಾಹಿತ್ಯ ವಿಚಾರ ಗೋಷ್ಠಿ**
ವಿಷಯ ಮಂಡನೆ **ಡಾ. ಸಿ.ಎನ್. ರಾಮಚಂದ್ರನ್, ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ** ಮತ್ತು **ಶ್ರೀ ರಮಾಕಾಂತ ಜೋಷಿ**

## 8 ಮತ್ತು 9 ಮಾರ್ಚ್ 2014



**ದೆಹಲಿ ಕರ್ನಾಟಕ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ**

### ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

**ಮಾರ್ಚ್ 8 ಶನಿವಾರ ಸಂಜೆ 4.00 ಗಂಟೆಗೆ**

**ಕರ್ನಾಟಕದ ಸಾಧಕಿಯರ ಸಾಂಸ್ಕೃತಿಕ ಉತ್ಸವ**

ರಂಗಗೀತೆ : ಪದ್ಮಶ್ರೀ ಡಾ. ಬಿ. ಜಯಶ್ರೀ
ಕರ್ನಾಟಕ ಸಂಗೀತ : ಎಂ.ಎಸ್. ಶೀಲಾ
ಭರತನಾಟ್ಯ : ಪ್ರತಿಭಾ ಪ್ರಹ್ಲಾದ್

**ಮಾರ್ಚ್ 9 ಭಾನುವಾರ ಬೆಳಿಗ್ಗೆ 11.00 ಗಂಟೆಗೆ**

**ವಿಚಾರ ಸಂಕಿರಣ**

ವೀರ ರಾಣಿ ಅಬ್ಬಕ್ಕ : ಮಂಜುಳಾ ಶೆಟ್ಟಿ, ಮಂಗಳೂರು
ದಾನ ಚಿಂತಾಮಣಿ ಅತ್ತಿಮಬ್ಬೆ : ಹೇಮಾಪಟ್ಟಣ ಶೆಟ್ಟಿ, ಧಾರವಾಡ

**ಸಂಜೆ 3.00 ಗಂಟೆಗೆ**

ಕಥಕ್ ಸಂಯೋಜಿತ ನೃತ್ಯ : ಪದ್ಮಶ್ರೀ ಗುರು ಮಾಯಾರಾವ್
ಭರತನಾಟ್ಯ ಸಂಯೋಜಿತ ನೃತ್ಯ : ಗುರು ಭಾನುಮತಿ ಅವರ ಭರತಾಂಜಲಿ ತಂಡದಿಂದ
ಜಾನಪದ ಹಾಡುಗಳು: ರಾಧಾಬಾಯಿ
ಚಲನಚಿತ್ರಗೀತೆಗಳು : ನಾಡೋಜ ಡಾ. ಬಿ.ಕೆ.ಸುಮಿತ್ರ
ವಚನ ಗಾಯನ : ಕಸ್ತೂರಿ ಶಂಕರ್
ಸುಗಮ ಸಂಗೀತ : ಸಂಗೀತ ಕಟ್ಟಿ

**ದೆಹಲಿಯ ಕಲಾವಿದೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮ**

ಸ್ಕಿಟ್, ಹಾಡು, ನೃತ್ಯ, ಇನ್‌ಸ್ಟ್ರುಮೆಂಟಲ್ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸ್ಥಳೀಯ ಮಹಿಳೆಯರು ತಮ್ಮ / ತಂಡದ ಹೆಸರನ್ನು ಸಂಘದ ಕಾರ್ಯಾಲಯದಲ್ಲಿ ಫೆಬ್ರವರಿ 23ರ ಒಳಗಾಗಿ ನೊಂದಾಯಿಸಬೇಕಾಗಿ ವಿನಂತಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಶ್ರೀಮತಿ ಎಸ್.ಸಿ. ಹೇಮಲತಾ
9971121636 / 8860848584 / 8860848585

**ಹಿಂದೂಸ್ತಾನಿ ಸಂಗೀತ**

ಪಂಡಿತ್ ಸೋಮನಾಥ್ ಮರಡೂರ್ ಅವರಿಂದ ಹಿಂದೂಸ್ತಾನಿ ಸಂಗೀತ ತರಗತಿಗಳು ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ

**ತಬಲಾ ಕಲಿಕೆ**

ಶ್ರೀ ಸುಧೀರ್ ಫಡ್ನೀಸ್ ಅವರಿಂದ ತಬಲಾ ಕಲಿಕೆ ತರಗತಿ ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ.

ಆಸಕ್ತಿಯುಳ್ಳವರು ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿ : 26109615 / 65643615 8860848584 / 8860848585

**ವೈದ್ಯಕೀಯ ಸಲಹೆಗಳು**

**ಡಾ. ಭೀಮ್ ಭಟ್** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 23 ಫೆಬ್ರವರಿ 2014 ರಂದು ಸಾಯಂಕಾಲ 4 ಗಂಟೆಯಿಂದ.
**ಡಾ. ನಿರಂಜನ್ ನಾಯ್ಕ್** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 16 ಫೆಬ್ರವರಿ 2014ರಂದು ಬೆಳಿಗ್ಗೆ 10 ಗಂಟೆಯಿಂದ

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848584 / 8860848585 – 011–26109615 / 65643615

# ಸಂಘದಲ್ಲಿ ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ನೆನಪು



'ಡಾ. ಜಿ.ಎಸ್. ಶಿವರುದ್ರಪ್ಪನವರು ಕುವೆಂಪು ಅವರ ನೆಚ್ಚಿನ ಶಿಷ್ಯರಾಗಿ ಅವರು ಹಾಕಿಕೊಟ್ಟ ದಾರಿಯಲ್ಲಿ, ಕನ್ನಡವನ್ನು ಬೆಳೆಸಲು ಪ್ರಯತ್ನಿಸಿದರು' ಎಂದು ದೆಹಲಿ ವಿಶ್ವವಿದ್ಯಾಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಡಾ. ಟಿ.ಎಸ್. ಸತ್ಯನಾಥ್ ಅವರು ಹೇಳಿದರು.

ಅವರು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಜನವರಿ 25ರಂದು ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರ ನೆನಪಿಗಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 'ಜಿಎಸ್ಎಸ್ ಅವರ ಬದುಕು ಮತ್ತು ಸಾಹಿತ್ಯ'ದ ಕುರಿತು ಮಾತಾಡುತ್ತಿದ್ದರು.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗಕ್ಕೆ ಪ್ರತಿಭಾವಂತರನ್ನೆಲ್ಲ ಕರೆಸಿ, ಭಿನ್ನ ಭಿನ್ನ ಚಿಂತನಾಕ್ರಮದ ಅಧ್ಯಾಪಕರನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿ, ಆ ವಿಭಾಗವನ್ನು ಕಟ್ಟಿದ ರೀತಿ ಮತ್ತು ಆ ಮೂಲಕ ನಾಡಿನ ಉದ್ದಗಲಕ್ಕೂ ಶಿಷ್ಯರನ್ನು ಬೆಳೆಸಿದ ರೀತಿ ಅನುಪಮವಾದುದು ಎಂದ ಅವರು 'ಮುಂದೆ ಆ ಶಿಷ್ಯರೇ ಕನ್ನಡಕ್ಕೆ ಅತ್ಯಂತ ಮೌಲಿಕವಾದ ಕೊಡುಗೆ ನೀಡಿದರು' ಎಂದು ಶಿವರುದ್ರಪ್ಪನವರ ಕೊಡುಗೆಯನ್ನು ಶ್ಲಾಘಿಸಿದರು. ಜೊತೆಗೆ ಶಿವರುದ್ರಪ್ಪನವರು ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಅವಧಿಯಲ್ಲಿ ಪಂಪ ಒಂದು ಅಧ್ಯಯನದಂಥ ಮಹತ್ವಪೂರ್ಣ ವಿಚಾರ ಸಂಕಿರಣವನ್ನು ಸಂಘಟಿಸಿ, ಇಡೀ ಕರ್ನಾಟಕದಲ್ಲಿ ಹೊಸಬಗೆಯ ಚರ್ಚೆಯನ್ನು ಹುಟ್ಟು ಹಾಕಿದರು ಎಂದು ಸತ್ಯನಾಥ ಹೇಳಿದರು. ತಮ್ಮ ಉಪನ್ಯಾಸದಲ್ಲಿ ಶಿವರುದ್ರಪ್ಪನವರ ಅವಧಿಯಲ್ಲಿ ಪ್ರಕಟವಾಗಿದ್ದ ಶ್ರೀ ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಮತ್ತು ಸಮಗ್ರ ಸಾಹಿತ್ಯ ಚರಿತ್ರೆ ಸಂಪುಟಗಳು ಕನ್ನಡ ಸಾಹಿತ್ಯ ಪರಂಪರೆಯನ್ನು ಜನರಿಗೆ ಪರಿಚಯಿಸುವಲ್ಲಿ ಯಶಸ್ವಿಯಾದುವು ಎಂದು ವಿಶ್ಲೇಷಿಸಿದರು.

ಇದೇ ಸಂದರ್ಭದಲ್ಲಿ ವಿದ್ವಾಂಸರಾದ ಡಾ. ಪುರುಷೋತ್ತಮ ಬಿಳಿಮಲೆಯವರು ಮಾತನಾಡುತ್ತ 'ಐದೂವರೆ ದಶಕಗಳಿಗೂ ಮೀರಿ ಕನ್ನಡ ಸಾಹಿತ್ಯ ಲೋಕವನ್ನು ಆಳಿದ ಮಹಾನ್ ಸಾಹಿತಿ ಡಾ. ಶಿವರುದ್ರಪ್ಪನವರು ಇತರೆ ಸಾಹಿತಿಗಳಿಗಿಂತ ಹೇಗೆ ಭಿನ್ನ' ಎಂಬುದನ್ನು ತಿಳಿಯಪಡಿಸಿದರು. 20 ನೇ ಶತಮಾನದ ಸಾಹಿತ್ಯ ಚಳುವಳಿಗಳೆಲ್ಲದರ ಅತ್ಯುತ್ತಮ ಅಂಶಗಳನ್ನು ಮೈಗೂಡಿಸಿಕೊಂಡು ಬರೆದ ಅವರು ಕನ್ನಡದ ಅತ್ಯುತ್ತಮ ಲೇಖಕರಲ್ಲೊಬ್ಬರು ಮಾತ್ರವಲ್ಲ ಎಲ್ಲ ತರಹದ ಓದುಗರನ್ನು ಮುಟ್ಟಿದ ವಿಶಿಷ್ಟ ವ್ಯಕ್ತಿ' ಎಂದು ಹೇಳಿದರು. ಅನೇಕ ಚಳುವಳಿಗಳ ನಡುವೆ ಕಾಣೆಯಾಗಿದ್ದ 'ಪಿಸು ಮಾತನ್ನು' ಕನ್ನಡಕ್ಕೆ ಕೊಟ್ಟವರು ಅವರು ಎಂದ ಡಾ. ಬಿಳಿಮಲೆಯವರು 'ಹೀಗೆ ಪಿಸುಮಾತಲ್ಲಿ ಬರೆದ ಇತರರೆಂದರೆ ಕಣವಿಯವರು ಮತ್ತು ನಾಗಚಂದ್ರ ಎಂದು ಹೇಳಿ, ಶಿವರುದ್ರಪ್ಪನವರು ಸಾಹಿತ್ಯ ರಚನೆಯ ಅನನ್ಯತೆಯ ಕಡೆಗೆ ಕೇಳುಗರ ಗಮನ ಸೆಳೆದು ಅವರು ನಾಡಿನ ವಿವೇಕದ ಸಂಕೇತವಾಗಿದ್ದರು' ಎಂದು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಶಿವರುದ್ರಪ್ಪನವರ ಅಗಲುವಿಕೆಯಿಂದ ಕನ್ನಡ ಸಾರಸ್ವತ ಲೋಕಕ್ಕಾದ ನಷ್ಟವನ್ನು ತಿಳಿಸುತ್ತಾ ಶಿವರುದ್ರಪ್ಪನವರು ಮತ್ತು ಸಂಘದೊಂದಿಗಿನ ಸಂಬಂಧವನ್ನು ವಿವರಿಸಿದರು.

ಡಾ. ಅಹಲ್ಯಾಚಿಂತಾಮಣಿ ಅವರು ಮಾತನಾಡುತ್ತ ಶಿವರುದ್ರಪ್ಪ ಅವರ ಧರ್ಮಪತ್ನಿಯ ಜೊತೆ ಕಳೆದ ಶಾಲಾ ದಿನಗಳನ್ನು ನೆನಪಿಸಿಕೊಂಡರು ಹಾಗೂ ಇಂದಿಗೂ ಅವರ ಭಾವಗೀತೆಗಳನ್ನು ನೆನಪಿಸಿಕೊಂಡು ಆನಂದಿಸುವುದನ್ನು ಎಲ್ಲರೊಡನೆ ಹಂಚಿಕೊಂಡರು.

ಶ್ರೀ ನರಸಿಂಹಮೂರ್ತಿಯವರು ಶಿವರುದ್ರಪ್ಪನವರ ಭಾವಗೀತೆಗಳು, ಚಲನಚಿತ್ರ ಪ್ರಪಂಚದಲ್ಲಿ ಹೊಸಶಖೆಯನ್ನು ಪ್ರಾರಂಭ ಮಾಡಿದ ಪರಿಯನ್ನು ನೆನೆದರು.



ಕನ್ನಡದ ಖ್ಯಾತ ಗಾಯಕಿ ಸಂಗೀತಾ ಕಟ್ಟಿ ಕುಲಕರ್ಣಿ ದಂಪತಿಗಳು ದೆಹಲಿ ಕರ್ನಾಟಕ ಸಂಘದಲ್ಲಿ ಶಿವರುದ್ರಪ್ಪನವರ ನೆನಪು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರೊಡಗಿದ್ದ ಸಂದರ್ಭಗಳ ನೆನಪನ್ನು ಹಂಚಿಕೊಂಡರು. ಜತೆಗೆ ಶಿವರುದ್ರಪ್ಪನವರ ಭಾವಗೀತೆಗಳನ್ನು ಹಾಡಿದರು.

ಶ್ರೀಮತಿ ಬಿ.ವೈ. ಸುಜಾತ ಪ್ರಸನ್ನ, ಶ್ರೀಮತಿ ಮಮತಾ ಶಿವರಾಮ್, ಶ್ರೀಮತಿ ಮಂಜುಳಾನಾಗರಾಜ್, ಶ್ರೀಮತಿ ಜ್ಯೋತಿ ಶಂಭು, ಶ್ರೀಮತಿ ಜಮುನಾ ಸಿ.ಮಠದ, ಡಾ. ವೈ. ಅವನೀಂದ್ರನಾಥ್ ರಾವ್, ಜನಕಪುರಿ ಮಹಿಳಾ ಮಂಡಳಿಯ ಸದಸ್ಯೆಯರಾದ ಶ್ರೀಮತಿ ಸವಿತಾ ಇನಾಮದಾರ್, ಶ್ರೀಮತಿ ಮೋಹಿನಿ ರೈ, ಶ್ರೀಮತಿ ಪ್ರೇರಣಾ ವೆಂಕಟೇಶ್ ಮತ್ತು ಶ್ರೀಮತಿ ಜಯಶ್ರೀ ಬಸವರಾಜ್ ಮೊದಲಾದವರು ಶಿವರುದ್ರಪ್ಪನವರ ಭಾವಗೀತೆಗಳನ್ನು ಹಾಡಿದರು.

ಆರಂಭದಲ್ಲಿ ಶಿವರುದ್ರಪ್ಪನವರ ಆತ್ಮಕ್ಕೆ ಶಾಂತಿಯನ್ನು ಕೋರಿ ಪ್ರಾರ್ಥಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಎಲ್ಲರಿಗೂ ವಂದಿಸಿದರು. ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಪಿ.ಸಿ. ಶ್ರೀನಿವಾಸ ಕಾರ್ಯಕ್ರಮ ನಿರೂಪಿಸಿದರು. ಅ

*ಪಿ.ಸಿ. ಶ್ರೀನಿವಾಸ*



# ದೆಹಲಿ ಕರ್ನಾಟಕ ಸಂಘಕ್ಕೆ ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ ಸಂಮಾನ



ಹೊರನಾಡಿನಲ್ಲಿ ಕನ್ನಡ ನಾಡು, ನುಡಿ, ಮುಖ್ಯವಾಗಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ನೀಡುತ್ತಿರುವ ದೆಹಲಿ ಕರ್ನಾಟಕ ಸಂಘಕ್ಕೆ 2013–14ರ ಸಾಲಿನ ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ ಸಂಮಾನವನ್ನು ನೀಡಿ ಗೌರವಿಸಲಾಯಿತು.

ಕರ್ನಾಟಕದ ಇತಿಹಾಸ ಪ್ರಸಿದ್ಧ ಶ್ರೀ ಇಡಗುಂಜಿ ಮೇಳಕ್ಕೆ 80 ವರ್ಷಗಳು ಸಂದ ಸಂದರ್ಭದಲ್ಲಿ ಕೆರೆಮನೆ ಶಂಭುಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ–5 ಕಾರ್ಯಕ್ರಮವು ಇದೇ ಜನವರಿ 18ರಿಂದ 22ರವರೆಗೆ ಉತ್ತರ ಕನ್ನಡ ಜಿಲ್ಲೆಯ ಗುಣವಂತೆಯಲ್ಲಿ ನಡೆದ ಸಂದರ್ಭದಲ್ಲಿ ಕರ್ನಾಟಕದ ಮಾಜಿ ಸಚಿವ ಹಾಗೂ ಶಾಸಕ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರಿಗೆ ಈ ಸಂಮಾನವನ್ನು ನೀಡಿದರು.

ಶ್ರೀ ಕಾಗೇರಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ ನಾಟ್ಯೋತ್ಸವದ ಕಲ್ಪನೆಯನ್ನು ಯೋಚಿಸಿ, ಯೋಚಿಸಿ, ಪ್ರತಿವರ್ಷವೂ ಅದರ ಮೆರುಗನ್ನು ಹೆಚ್ಚಿಸುತ್ತಾ ಬಂದಿರುವ ಸಂಘಟಕರ ಪ್ರಯತ್ನ ಶ್ಲಾಘನೀಯ ಎಂದರು. ಜಾಗತಿಕ ವೇದಿಕೆಯಲ್ಲಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಯಕ್ಷಗಾನವನ್ನು ಬಿಂಬಿಸುವ ಪ್ರಯತ್ನ ಈ ನಾಟ್ಯೋತ್ಸವ ಸಂಘಟನೆಯಿಂದ ನಡೆಯುವಂತಾಗಲಿ ಎಂದರು.

ದೆಹಲಿ ಕರ್ನಾಟಕ ಸಂಘವು ದೇಶದ ರಾಜಧಾನಿಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು ನಾಡಿಗೆ ದೆಹಲಿ ಕನ್ನಡಿಗರ ಕೊಡುಗೆಯನ್ನು ಕೊಂಡಾಡಿದರು. ಸಂಘದ ಯುವ ಹಾಗೂ ಉತ್ಸಾಹೀ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಸಾಂಸ್ಕೃತಿಕ ಕ್ಷೇತ್ರಕ್ಕೆ ಹೆಚ್ಚು ಒತ್ತುಕೊಟ್ಟು ಕೆಲಸ ಮಾಡುತ್ತಿರುವುದು ಪ್ರಶಂಸನೀಯವೆಂದು ಶ್ರೀ ಕಾಗೇರಿ ಅವರು ಹೇಳಿದರು. ಐದು ದಿನಗಳ ಮಹತ್ವದ ರಾಷ್ಟ್ರೀಯ ನಾಟ್ಯೋತ್ಸವದಂದು ವಿಚಾರ ಸಂಕಿರಣ, ಸಂಗೀತ, ನಾಟಕ, ಯಕ್ಷಗಾನ, ನೃತ್ಯ ಕಲಾವಿದರಿಗೆ, ವಿದ್ವಾಂಸರಿಗೆ ಸನ್ಮಾನ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಿತು.

ಸನ್ಮಾನಿತ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ಸಂಘವು ಕಲಾವಿದರು, ಸಾಹಿತಿಗಳು ಮತ್ತು ಸಂಘಟಕರು, ವಿದ್ವಾಂಸರಿಗಾಗಿ ಇರುವಂತಹದ್ದು. ಇಂದು ತಾವು ನೀಡಿದ ಈ ಸನ್ಮಾನವು ಈ ಎಲ್ಲರಿಗೂ ಸಂದಿದೆಯೆಂದರು. ಇತ್ತೀಚಿನ ವರ್ಷಗಳಲ್ಲಿ ಎಲ್ಲವೂ ದಾಖಲಾಗುತ್ತದೆ. ಆದರೆ 20–25 ವರ್ಷಗಳ ಹಿಂದೆ ಗತಿಸಿದ ಮಹಾನ್ ಕಲಾವಿದರ ಬಗ್ಗೆ ದಾಖಲೆಯಿಲ್ಲದೆ ಅವರ ಹೆಸರು ಮುಂದಿನ ಪೀಳಿಗೆಗೆ ಗೊತ್ತಿಲ್ಲದೆ ಹೋಗಬಹುದು. ಅಂತಹ ಮಹಾನ್ ಕಲಾವಿದರ ಚರಿತ್ರೆಯನ್ನು ಸಂಗ್ರಹಿಸಿ ದಾಖಲಿಸುವ ಕೆಲಸ ಆಗಬೇಕು ಎಂದು ಹೇಳಿದರು. ಹಿರಿಯರು ಕಟ್ಟಿ ಬೆಳೆಸಿದ ದೆಹಲಿ ಕರ್ನಾಟಕ ಸಂಘದ ಅತ್ಯಂತ ಕಿರಿಯ ಅಧ್ಯಕ್ಷನಾಗಿ ಕೆಲಸ ಮಾಡುವ ಭಾಗ್ಯ ನನ್ನದಾಗಿದ್ದು, ಅವರ ಕಲ್ಪನೆಯ ಕರ್ನಾಟಕ ಸಂಘವನ್ನು ಮುಂದುವರಿಸುವುದು ನನ್ನ ಗುರಿಯಾಗಿದೆಯೆಂದರು.

ಇದೇ ಸಂದರ್ಭದಲ್ಲಿ ಜಾನಪದ ವಿದ್ವಾಂಸ ಡಾ.ಎನ್.ಆರ್. ನಾಯಕ, ಕಲಾ ಪೋಷಕ ಶ್ರೀ ವಿ.ಆರ್. ಶಾಸ್ತ್ರಿ ಅವರನ್ನು ಸನ್ಮಾನಿಸಲಾಯಿತು.

ಶ್ರೀ ಇಡಗುಂಜಿ ಮೇಳದ ನಿರ್ದೇಶಕ ಶ್ರೀ ಕೆರೆಮನೆ ಶಿವಾನಂದ ಹೆಗಡೆ ಅವರು ಮಾತನಾಡಿ ದೂರದ ದೆಹಲಿಯಲ್ಲಿರುವ ಕರ್ನಾಟಕ ಸಂಘವು ದೆಹಲಿಗೆ ಹೋದ ಕಲಾವಿದರಿಗೊಂದು ಆಸರೆಯಿದ್ದಂತೆ ಎಂದರು. ದೆಹಲಿ ಕರ್ನಾಟಕ ಸಂಘವು ಈಗ ಹಲವಾರು ವರ್ಷಗಳಿಂದ ಇಡೀ ದೇಶಕ್ಕೆ ಮಾದರಿಯಾಗಿ ಕನ್ನಡ ನಾಡು ನುಡಿಯ ಕೆಲಸದಲ್ಲಿ ಮುಖ್ಯವಾಗಿ ಸಾಂಸ್ಕೃತಿಕವಾಗಿ ಅಪಾರವಾದ ಸೇವೆಯನ್ನು ಕೈಗೊಂಡಿರುವುದು ಒಂದು ಅಪರೂಪದ ವಿದ್ಯಮಾನವಾಗಿದೆ. ಸಂಘದ ಪ್ರತಿಯೊಬ್ಬರು ತಮ್ಮ ವರ್ಚಸ್ಸಿನ ಧಾರೆ ಎರೆದು ತನು ಮನ ಧನಗಳಿಂದ ದೆಹಲಿಯಲ್ಲಿ ಕನ್ನಡ ಸಂಸ್ಕೃತಿಯ ನಿಜವಾದ ರಾಯಭಾರಿಯಾಗಿ ನಿರಂತರ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಅದರಲ್ಲೂ ಮುಖ್ಯವಾಗಿ ಈಗಿನ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಹತ್ತು ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳ ಕನಸನ್ನು ಕಟ್ಟಿಕೊಂಡುವರು, ದೆಹಲಿ ಕರ್ನಾಟಕ ಸಂಘಕ್ಕೆ ನಾವು ಇಂದು ಸನ್ಮಾನಿಸುತ್ತಿರುವುದು ನಮಗೆ ಅತೀವ ಸಂತಸವೆಂದರು.





ಈ ಕಾರ್ಯಕ್ರಮದಲ್ಲಿ ಸಾಹಿತಿ ಶ್ರೀಧರ ಬಳಿಗಾರ, ಶ್ರೀ ದೇವರು ಹೆಗಡೆ ಪ್ರತಿಷ್ಠಾನದ ಶ್ರೀ ನಿತ್ಯಾನಂದ ಹೆಗಡೆ, ಬೆಂಗಳೂರಿನ ಪ್ರಶಾಂತಿ ಆಯುರ್ವೇದಿಕ ಕೇಂದ್ರದ ವೈದ್ಯ ಡಾ. ಗಿರಿಧರ ಕಜೆ, ಜಿಲ್ಲಾ ಪಂಚಾಯತ್ ಸದಸ್ಯೆ ಶ್ರೀಮತಿ ವನಿತಾ ನಾಯ್ಕ್ ಉಪಸ್ಥಿತರಿದ್ದರು. ಅ

***ಅಭಿಮತ ವರದಿ***

**ಶ್ರದ್ಧಾಂಜಲಿ**

# ಕನ್ನಡಿಗ ಶಿಲ್ಪ ಕಲಾವಿದ ಡಿ.ಎಂ. ಶಂಭು

**ದಾವಣಗೇರಿ ಮಲ್ಲಾಬಾದಿ ಶಂಭು ಅವರು ಕರ್ನಾಟಕದಲ್ಲಿ ಹುಟ್ಟಿ, ದೆಹಲಿಯಲ್ಲಿ ಸುಮಾರು ಆರು ದಶಕಗಳಷ್ಟು ವರ್ಷ ಕಲಾಸೇವೆಯಲ್ಲಿ ತೊಡಗಿ ಇದೀಗ ಇದೇ ಜನವರಿ ಎಂಟರಂದು ನಿಧನರಾದರು. ಡಿ.ಎಂ. ಶಂಭು ಅವರನ್ನು ಬಹಳಷ್ಟು ವರ್ಷಗಳಿಂದ ಹತ್ತಿರದಿಂದ ಕಂಡಿರುವ ಚೆನ್ನು ಎಸ್. ಮಠದ ಅವರು ಈ ಮಹಾನ್ ಕಲಾವಿದನಿಗೆ ಅಭಿಮತದ ಮೂಲಕ ಶ್ರದ್ಧಾಂಜಲಿ ಅರ್ಪಿಸುತ್ತಿದ್ದಾರೆ.**





ದಹಲಿಗೆ ನಾನು ಬಂದ ಹೊಸದರಲ್ಲಿ, ಅಂದರೆ 1979–80ರಲ್ಲಿ, ಮೊದಲ ಬಾರಿಗೆ ದೆಹಲಿಯ ನೇತಾಜಿ ನಗರದಲ್ಲಿದ್ದ ಕಲಾವಿದ ಡಿ.ಎಂ. ಶಂಭು ಅವರ ಮನೆಗೆ ಹೋಗಿದ್ದ ನೆನಪು ನನಗೆ ಇಂದಿಗೂ ಹಚ್ಚ ಹಸಿರಾಗಿದೆ. ಏಕೆಂದರೆ ಆ ಭೇಟಿಯೇ ಅಷ್ಟೊಂದು ವಿಶಿಷ್ಠವಾಗಿತ್ತು. ಆ ದಿನಗಳಲ್ಲಿ ಬೆಳಗಿನ ಜಾವದ ಚಳಿಯಲ್ಲಿಯೂ ಸ್ನಾನ ಪೂಜೆ ಮುಗಿಸಿ ಹಣೆಗೆ ವಿಭೂತಿ ಧರಿಸಿ ಸೃಜನಾತ್ಮಕ ಕೃತಿಯೊಂದರ ನಿರ್ಮಾಣದಲ್ಲಿ ತಲ್ಲೀನರಾಗಿದ್ದ ಅವರನ್ನು ಕಂಡು ದಂಗಾಗಿದ್ದೆ. ಮೃದು, ಮಿತ ಭಾಷಿಯಾಗಿದ್ದ ಅವರು ಕರ್ಮಯೋಗಿಯಂತೆ ಕಂಡಿದ್ದರು. ಅವರ ಮನೆಯ ವಾತಾವರಣ ನನಗೆ ನನ್ನ ಹುಟ್ಟೂರು ಮತ್ತು ನನ್ನವರನ್ನು ತೊರೆದು ದೆಹಲಿಗೆ ಬಂದಿದ್ದ ನನ್ನ ನೊಂದ ಮನವನ್ನು ತಟ್ಟನೇ ದೆಹಲಿಯಿಂದ ಧಾರವಾಡಕ್ಕೆ ನೂಕಿದಂತಾಗಿತ್ತು. ಅಂದೊಂದು ಮರೆಯಲಾಗದ ಅಮೋಘ ಅನುಭವ!

ಬಾಲ್ಯದಿಂದಲೇ ಕಾಡುತ್ತಿದ್ದ ಕಲಾಸಕ್ತಿ, ಹದಿವಯಸ್ಸಿನಲ್ಲಿಯೇ ಅವರನ್ನು ಹುಟ್ಟೂರಾದ ಮೈಸೂರು ತೊರೆಯುವಂತೆ ಮಾಡಿತ್ತು. ಅವರು 1944ರಲ್ಲಿ ಮೈಸೂರಿನ ಪ್ರಸಿದ್ಧ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನಿಂದ ಚಿತ್ರಕಲೆಯಲ್ಲಿ ಡಿಪ್ಲೋಮಾ ಮಾಡಿದರು. ಬಾಲ್ಯದಿಂದಲೇ ಸೃಜನಶೀಲ ಸೃಷ್ಟಿ ಚಿತ್ರ ಕಲೆಯಲ್ಲಿ ನಿಪುಣರಾಗಿದ್ದ ಅವರು ದೇಶದ ಹೆಚ್ಚಿನ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಿ ಕೃತಿಗಳನ್ನು ರಚಿಸಿದರು.

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಕಲಾಕೃತಿಯೊಂದರ ನಿರ್ಮಾಣದಲ್ಲಿ ನಿರತರಾಗಿದ್ದಾಗ, ಭರತಪುರದ ಮಹಾರಾಜರು ಅವರನ್ನು ನೋಡಿ ಪ್ರಶಂಶಿಸಿ ತಮ್ಮಲ್ಲಿಗೆ ಕರೆತಂದು ಅರಮನೆಯಲ್ಲಿಯೇ ಇಟ್ಟುಕೊಂಡರು. ರಾಜಪೂತರ ಬಣ್ಣಬಣ್ಣದ ಪೋಷಾಕು, ಕುದುರೆ, ಒಂಟೆಗಳು, ಅರಮನೆಗಳು, ಭಿತ್ತಿಚಿತ್ರ ಕಲೆಯಿಂದ ಆವೃತ್ತಗೊಂಡ ಮಹಲುಗಳು ಹಾಗೂ ಸೃಷ್ಟಿ ಸೌಂದರ್ಯವನ್ನು ಸಾಕಷ್ಟು ಕೃತಿಗಳಲ್ಲಿ ಹಿಡಿದಿಟ್ಟರು.

ಅರಮನೆಯ ವಾತಾವರಣ ಅವರಲ್ಲಿ ಅಡಗಿದ್ದ ಕಲಾವಿದನ ಬೆಳವಣಿಗೆಗೆ ಅಡ್ಡಿಯಾಗುವುದನ್ನು ಅರಿತುಕೊಂಡ ಶಂಭು ಅವರು ಮುಂಬೈಗೆ ತೆರಳಿ ಕಲಾಭ್ಯಾಸ ಮುಂದುವರಿಸಲು ನಿರ್ಧರಿಸಿದರು. ಅದಕ್ಕೆ ಮಹಾರಾಜರ ಅನುಮೋದನೆ, ಪೋಷಣೆ ದೊರೆತು ಅಂದಿನಕಾಲದಲ್ಲಿ ಪ್ರಸಿದ್ಧಿ ಪಡೆದಿದ್ದ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ಗೆ (1948–53) ಸೇರಿ ಕೆತ್ತನೆ, ತದ್ರೂಪ ಕೃತಿ ನಿರ್ಮಾಣದಲ್ಲಿ ವಿಶೇಷ ತರಬೇತಿಯೊಂದಿಗೆ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದರು.

ಅವರು ಪೂರೈಸಿದ ಎಲ್ಲ ತರಬೇತಿಗಳಲ್ಲಿ ಪ್ರಥಮ ದರ್ಜೆಯಲ್ಲಿ ಪ್ರಥಮ ಸ್ಥಾನಗಳಿಸುತ್ತಿದ್ದುದು ಅವರ ಏಕಾಗ್ರತೆಯ ಸಂಕೇತವಾಗಿತ್ತು. ಅವರನ್ನು ಯಾರು ಯಾವಾಗ ಮಾತನಾಡಿದರೂ ಕಲಾಕೃತಿ ಕಲಾಚರ್ಚೆಯನ್ನುಳಿದು ಅನ್ಯ ವಿಷಯ ಚರ್ಚಿಸುತ್ತಲೇ ಇರಲಿಲ್ಲ. ಕಲೆಗೆ ಇವರ ಸಮರ್ಪಣೆ ಅಷ್ಟೊಂದು ಸಂಪೂರ್ಣವಾಗಿತ್ತು. ಏಕಾಗ್ರತೆ ಅಮೋಘವಾಗಿತ್ತು, ಅಂತೆಯೇ ಅವರ ಕೃತಿಗಳಲ್ಲಿ ಪರಿಪೂರ್ಣತೆಯನ್ನು ನಾವು ಕಾಣಬಹುದು.

ಅವರು ತಮ್ಮ ವೃತ್ತಿ ಜೀವನವನ್ನು 1953ರಲ್ಲಿ ಭಾರತೀಯ ಪುರಾತತ್ವ ವಿಭಾಗ (ಆರ್ಕಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ) ಸೇರುವುದರೊಂದಿಗೆ ಪ್ರಾರಂಭಿಸಿದರು. ಆ ದಿನಗಳಲ್ಲಿ ಇವರು ರಚಿಸಿದ ಹರಪ್ಪಾ, ಮೊಧೆರಾ ಸೂರ್ಯಮಂದಿರ ಹಾಗೂ ರಂಗಪುರದ ಉತ್ಖನನದ ಅವಶೇಷಗಳ ಪ್ರತಿಕೃತಿ ಪ್ರದರ್ಶನವನ್ನು ದೆಹಲಿಯಲ್ಲಿ ಏರ್ಪಡಿಸಲಾಗಿತ್ತು. ಅದಕ್ಕೆ ದೆಹಲಿಯ ಪ್ರತಿಷ್ಠಿತ ವ್ಯಕ್ತಿಗಳಿಂದ ಶ್ಲಾಘನೆ ದೊರೆತು ಮುಂದೊಮ್ಮೆ ಅವರು ದೆಹಲಿಯ ಜನಪಥ್‌ನಲ್ಲಿರುವ ರಾಷ್ಟ್ರೀಯ ಸಂಗ್ರಹಾಲಯಕ್ಕೆ ಆಯ್ಕೆಗೊಳ್ಳಲು ಸಹಕಾರಿಯಾಯಿತು. ಹೀಗೆ ಡಿ.ಎಂ. ಶಂಭು ಅವರು ಸತತ ಸ್ವಪ್ರಯತ್ನ ಹಾಗೂ ಪರಿಶ್ರಮದಿಂದಲೇ ತಮ್ಮ ಸುದೀರ್ಘ ಜೀವನದುದ್ದಕ್ಕೂ ಜನ ಮೆಚ್ಚುಗೆ ಪಡೆದರು. ರಾಷ್ಟ್ರೀಯ ಸಂಗ್ರಹಾಲಯದಲ್ಲಿ 1955ರಿಂದ 1982ರವರೆಗೆ ಸೇವೆ ಸಲ್ಲಿಸಿ ಮುಖ್ಯ ಮಾಡೆಲ್‌ರ ಹುದ್ದೆಯಿಂದ ನಿವೃತ್ತಿಹೊಂದಿದರು.

ಚಿತ್ರಕಲೆ, ಶಿಲ್ಪಕಲೆ ಹಾಗೂ ಮೂರ್ತಿವಿನ್ಯಾಸ ಕಲೆ ಮೂರರಲ್ಲೂ ಪರಿಣತಿ ಪಡೆದಿದ್ದ ಶಂಭು ಅವರು ತಮ್ಮ ಅಪ್ರತಿಮ ಜ್ಞಾನಧಾರೆಯಿಂದ ಅನೇಕ ಕೃತಿಗಳನ್ನು ಸಂಗ್ರಹಾಲಯಕ್ಕೆ ನೀಡಿದರು. ಅವರು ನಿರ್ಮಿಸಿದ ಸಾರಾನಾಥ ಬುದ್ಧನ ಪ್ರತಿಮೆಯ ಪ್ರಮಾಣಬದ್ಧ ಪ್ರತಿಕೃತಿಗಳು ಜಗತ್ತಿನ ಎಲ್ಲ ಪ್ರಸಿದ್ಧಿ ಸಂಗ್ರಹಾಲಯಗಳನ್ನು ತಲುಪಿವೆ. ಉತ್ಖನನಗಳಲ್ಲಿ ದೊರೆತ ಕೃತಿಗಳನ್ನು ವಿಶ್ಲೇಷಿಸಿ ಅವುಗಳ ಪ್ರತಿಕೃತಿ ರಚಿಸುವಲ್ಲಿ ಅವರು ನಿಪುಣತೆಯನ್ನು ಸಾಧಿಸಿದರು. ಪ್ರಾಚೀನ ಶಿಲಾನ್ಯಾಸದ ಅಪಾರಜ್ಞಾನ ಅವರಿಗಿತ್ತು.

ಅಂತೆಯೇ 1975ರಲ್ಲಿ ಸಂಗ್ರಹಾಲಯದ ನಿರ್ದೇಶಕರಾಗಿದ್ದ ಸಿ. ಶಿವರಾಮಮೂರ್ತಿ ಅವರನ್ನು ಕುರಿತು ಹೀಗೆ ಹೇಳುತ್ತಾರೆ "ಚಿತ್ರಕಲೆ ಹಾಗೂ ಶಿಲ್ಪಕಲೆ ಎರಡರಲ್ಲೂ ಪರಿಣತಿ ಪಡೆದಿರುವ ಡಿ.ಎಂ. ಶಂಭು ಅವರು ಈ ಸಂಗ್ರಹಾಲಯದ ಅಮೂಲ್ಯ ಅಧಿಕಾರಿ ಮೂರ್ತಿ ಕಲಾ ಹಾಗೂ ಪ್ರತಿಕೃತಿ ನಿರ್ಮಾಣ ವಿಭಾಗವನ್ನು ಮುಖ್ಯಸ್ಥರಾಗಿ ಅತೀವ ದಕ್ಷತೆಯಿಂದ ನಡೆಸಿದರು. ಅವರ ಸ್ವಚ್ಛ ಸರಳ ವ್ಯವಹಾರಿಕತೆ, ಪ್ರಾಮಾಣಿಕತೆ ಹಾಗೂ ಅಪ್ರತಿಮ ಕಾರ್ಯತತ್ಪರತೆಯನ್ನು ಗಮನಿಸಿದರೆ ಅವರಿಗೆ ನೀಡಲು ಯೋಗ್ಯ ಪದವಿ ನಮ್ಮ ರಾಷ್ಟ್ರೀಯ ಸಂಗ್ರಹಾಲಯದಲ್ಲಿಯೇ ಇಲ್ಲ". ಇದಕ್ಕಿಂತ ಹೆಚ್ಚಿನ ಬಿರುದು ಬೇಕೆ?

ನಿವೃತ್ತಿಯ ನಂತರವೂ ಅವರು ಅವಿರತ ಶ್ರಮ ವಹಿಸಿ ಅನೇಕ ಕೃತಿಗಳನ್ನು ನಿರ್ಮಿಸಿದರು.

ದೆಹಲಿಯ ವಿಮಾನ ನಿಲ್ದಾಣದ "ಹಾರುತ್ತಿರುವ ಗಂಧರ್ವ", "ಬುದ್ಧನ ಪಾದ" ಸುಪ್ರೀಂಕೋರ್ಟ್ ಆವರಣದಲ್ಲಿರುವ "ಮಹಾತ್ಮ ಗಾಂಧಿ", ರಾಷ್ಟ್ರಪತಿ ಭವನದಲ್ಲಿನ "ಅಪ್ಸರೆ" ಪ್ರಗತಿ ಮೈದಾನದ ಬಿಹಾರ ಪೆವಿಲಿಯನ್‌ನ "ಬುದ್ಧ", "ಲುಂಬಿನಿ ಕಂಬಗಳು" ಶಂಭು ಅವರು ನಿರ್ಮಿಸಿದ ಉನ್ನತ ಕಲಾಕೃತಿಗಳು. ಶಂಭು ಅವರ ಹೆಚ್ಚಿನ ಕೃತಿಗಳು ಪಾರಂಪರಿಕತೆಯಿಂದ ಪ್ರಮಾಣ ಬದ್ಧತೆಗಳಲ್ಲಿ ನಿರ್ಮಿತಗೊಂಡವುಗಳು. ಪ್ರಾಚೀನ ಮಂದಿರಗಳು, ಅಜಂತಾ–ಎಲ್ಲೋರಾಗಳಲ್ಲಿ ಕಂಡು ಬರುವ ಮೂರ್ತಿ ಕಲಾ ಹಾಗೂ ಭಿತ್ತಿ ಕಲಾ ನೈಪುಣ್ಯತೆ ನಮಗೆ ಅವರ ಕೃತಿಗಳಲ್ಲಿ ಕಾಣಲು ಸಾಧ್ಯ. ಭಿತ್ತಿ, ಶಿಲ್ಪಕಲೆ, ಪ್ರಸಿದ್ಧ ಐತಿಹಾಸಿಕ ಶಿಲ್ಪಕಲಾಕೃತಿಗಳ ಪ್ರತಿಕೃತಿ ನಿರ್ಮಾಣ, ಐತಿಹಾಸಿಕ ಕೃತಿಗಳ ಜೀರ್ಣೋದ್ಧಾರ ಕಾರ್ಯಗಳಲ್ಲಿ ಅವರು ಸಿದ್ಧ ಹಸ್ತರಾಗಿದ್ದರು. ಮಧ್ಯ ಪ್ರದೇಶದ ಭಾವಗಜಾದಲ್ಲಿ 3000 ವರ್ಷಗಳ ಹಿಂದೆ ಸ್ಥಾಪಿತಗೊಂಡಿದ್ದ 83 ಅಡಿ ಎತ್ತರದ ಮಹಾನ್ ಕೃತಿ ನಶಿಸಿಹೋಗುವ ಸ್ಥಿತಿಯಲ್ಲಿದ್ದಾಗ, ಶಂಭು ಅವರು ಮೂರ್ತಿಯ ಜೀರ್ಣೋದ್ಧಾರ ಕಾರ್ಯವನ್ನು ಅತೀವ ಸಮರ್ಪಣಾ ಭಾವದಿಂದ ಸೃಷ್ಟಿಸಿ ಮಾಜಿ ರಾಷ್ಟ್ರಪತಿಗಳಾದ ಬಿ.ಡಿ. ಜತ್ತಿ, ಶಂಕರ್ ದಯಾಲ್ ಶರ್ಮ, ಡಾ. ಜಾಕಿರ್ ಹುಸೇನ್ ಮುಂತಾದವರ ಮೆಚ್ಚುಗೆಗೆ ಪಾತ್ರರಾದರು. ಇದಲ್ಲದೆ ಗಣರಾಜ್ಯೋತ್ಸವ ಸಂದರ್ಭದಲ್ಲಿ ಪ್ರದರ್ಶಿತಗೊಂಡ ಇವರು ನಿರ್ಮಿಸಿದ ಟ್ಯಾಬ್ಲೋ 'ಕಾಡುಮೃಗಗಳ ಸಂರಕ್ಷಣೆ' ಅಪಾರ ಜನಮೆಚ್ಚುಗೆ ಗಳಿಸಿ ಪ್ರಧಾನಿಯವರ ಮೆಚ್ಚುಗೆ ಪಡೆದುದಲ್ಲದೆ ರಕ್ಷಾ ಮಂತ್ರಾಲಯದ ಮೆಚ್ಚುಗೆ ಪದಕ ಗಳಿಸಿತು.

ಇಂಥ ಇನ್ನೂ ಅನೇಕ ಅಮೋಘ ಕೃತಿಗಳನ್ನು ರಚಿಸಿ ದೆಹಲಿಯಲ್ಲಿ ಓರ್ವ ಕನ್ನಡಿಗರಾಗಿ ಡಿ.ಎಂ. ಶಂಭು ಅವರು ನಮ್ಮೆಲ್ಲರ ಹೆಮ್ಮೆಗೆ ಪಾತ್ರರಾಗಿದ್ದಾರೆ. ಇಷ್ಟೊಂದು ಮಹತ್ತರ ಕೃತಿಗಳನ್ನು ಅವರ ಸರಳ ಸಜ್ಜನಿಕೆ, ಪ್ರಚಾರ ಪಡೆಯದ ವ್ಯಕ್ತಿತ್ವಗಳಿಂದ ದೇಶಕ್ಕೆ ನೀಡಿದ್ದಾರೆ ಎಂದು ನಮಲ್ಲಿ ಬೆರಗು ಮೂಡಿಸುತ್ತಾರೆ. ಅವರ ಕಲಾಕೃತಿಗಳನ್ನು ಮೆಚ್ಚಿಕೊಂಡು ಅವರಿಗೆ ನೀಡಿದ ಪ್ರಶಸ್ತಿಗಳು, ಸನ್ಮಾನಗಳು ಅನೇಕ. ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ಅವರು ಶಿಲ್ಪಕಲಾ ಪ್ರಶಸ್ತಿಯನ್ನು ಅಂದಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರಿಂದ ಸ್ವೀಕರಿಸಿದ್ದರು.

ಶಂಭು ಅವರ ಜೀವನ ಸಂಗಾತಿ ಪಾರ್ವತಿಯವರು ನವೆಂಬರ್ 2003ರಲ್ಲಿ ದಿವಂಗತರಾದರು. ಶಂಭು ಅವರಿಗೆ ಓರ್ವ ಹೆಣ್ಣು ಮಗಳು (ದೇವಿ ಮಿರ್ಜಿ) ಹಾಗೂ ಕೈಲಾಸನಾಥ, ವಿಶ್ವನಾಥ ಮತ್ತು ಜಗದೀಶ ಕುಮಾರರೆಂಬ ಮೂವರು ಗಂಡು ಮಕ್ಕಳು ಹಾಗೂ ಐದು ಮೊಮ್ಮಕ್ಕಳು ಇದ್ದಾರೆ. ಶಂಭು ಅವರ ಅಗಲಿಕೆಯಿಂದ ಕಲಾ ಜಗತ್ತು ಓರ್ವ ಶ್ರೇಷ್ಠ ಚಿತ್ರ ಹಾಗೂ ಶಿಲ್ಪ ಕಲಾವಿದನನ್ನು ಕಳೆದುಕೊಂಡಿದೆ. ಆದರೆ ಅವರು ನಿರ್ಮಿಸಿದ ಕೃತಿಗಳಿಂದ ಅವರು ಎಂದೆಂದಿಗೂ ಅಮರರಾಗಿದ್ದಾರೆ. ಇಂಥ ಮಹಾನ್ ಶಿಲ್ಪ ಕಲಾವಿದನಿಗೆ ನಮ್ಮ ಶ್ರದ್ಧಾ ಸುಮಗಳು. ಅ

***ಚೆನ್ನು ಎಸ್. ಮಠದ***

## ಕರ್ನಾಟಕ ಕಲಾವಿದರ ಚಿತ್ರಕಲಾ ಪ್ರದರ್ಶನ

# ಕಲೆಯಲ್ಲಿ ವೈವಿಧ್ಯತೆ ಇದೆ -ರಾಮ್ ವಿ. ಸುತಾರ





ಕರ್ನಾಟಕದ ಚಿತ್ರ ಕಲಾವಿದರಾದ ಕರಿಯಪ್ಪ ಹಂಚಿನಮನಿ, ಶಿವು ಹಾದಿಮನಿ, ಕುಮಾರ ಕಾಟೇನಹಳ್ಳಿ ಮತ್ತು ಚಂದ್ರಶೇಖರ ಅವರ ಚಿತ್ರಕಲಾ ಪ್ರದರ್ಶನವನ್ನು ಖ್ಯಾತ ಶಿಲ್ಪ ಕಲಾವಿದ ಪದ್ಮಶ್ರೀ ರಾಮ್ ವಿ. ಸುತಾರ ಅವರು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಜನವರಿ 12ರಂದು ಉದ್ಘಾಟಿಸಿದರು.

ಶ್ರೀ ಸುತಾರ ಅವರು ಮಾತನಾಡುತ್ತಾ ಈ ಎಲ್ಲಾ ಕಲಾವಿದರ ಕಲೆಯಲ್ಲಿ ವೈವಿಧ್ಯತೆ ಇದೆ ಮತ್ತು ಅವು ದೆಹಲಿಯಲ್ಲಿ ಪ್ರದರ್ಶನಗೊಳ್ಳುವುದರಲ್ಲಿ ವಿಶೇಷತೆ ಇದೆ ಎಂದರು. ದೆಹಲಿಯ ಜನರಿಗೆ ನವೀನ ರೀತಿಯ ಉತ್ತಮವಾದ ಕಲಾಕೃತಿಗಳನ್ನು ನೋಡಲು ಮತ್ತು ಖರೀದಿಸಲು ಒಳ್ಳೆಯ ಅವಕಾಶವಾಗಿದೆ ಎಂದು ಅವರು ನುಡಿದರು.

ಮುಖ್ಯ ಅತಿಥಿಯಾಗಿದ್ದ ಬೌದ್ಧ ಧರ್ಮಗುರು ಡಾ. ಭಂತೆ ಗ್ಯಾನ ರತ್ನ ಮಹತೆರಾ ಅವರು ಮಾತನಾಡಿ ಸೌಂದರ್ಯ ಎಂಬುದು ಮನುಷ್ಯನ ಹೊರಮೈಯಿಂದ ಅಳೆಯಲು ಸಾಧ್ಯವಿಲ್ಲ, ಅದು ಮಾನವನ ಒಳಗಡೆ ಅಡಗಿರಬೇಕು ಎಂದರು. ಈ ಕಲಾವಿದರ ಸೌಂದರ್ಯವನ್ನು ಅವರ ಕಲಾಕೃತಿಗಳಲ್ಲಿ ನಾವು ಕಾಣುತ್ತಿದ್ದೇವೆ. ಅವರ ನೆಲದ ಸೌಂದರ್ಯ ಇವರ ಕಲಾಕೃತಿಗಳಲ್ಲಿ ಎದ್ದು ಕಾಣುತ್ತಿದೆ ಎಂದು ಅಭಿಪ್ರಾಯಪಟ್ಟರು.

ಪ್ರದರ್ಶನದ ಆಯೋಜಕರಾದ ಶ್ರೀ ಎಸ್. ಕೆ. ದತ್ತ ಅವರು ಈ ಕಲಾವಿದರಿಗೆ ಚಿತ್ರಕಲೆಯಲ್ಲಿ ಉಜ್ವಲ ಭವಿಷ್ಯವಿದೆ ಎಂದರು. ಇದೇ ಸಂದರ್ಭದಲ್ಲಿ ದೆಹಲಿ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಮಾಜಿ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಛಾಯಾಗ್ರಾಹಕ ಶ್ರೀ ಆನಂದ ಮುರಗೋಡ ಮತ್ತು ಅಪೋಲೊ ಆಸ್ಪತ್ರೆಯ ಡಾ. ಮುರಳಿ ಅವರು ಉಪಸ್ಥಿತರಿದ್ದರು. ಚಿತ್ರಕಲಾ ಪ್ರದರ್ಶನವು ಜನವರಿ 12 ರಿಂದ 18ರವರೆಗೆ ನಡೆಯಿತು. ಅ

***ಅಭಿಮತ ವರದಿ***

# ಸಂಘದಲ್ಲಿ 'ಮಂಗ ಮಾಣಿಕ್ಯ ಪ್ರಹಸನ' ನಾಟಕ ಪ್ರದರ್ಶನ



ಬೆಂಗಳೂರಿನ ಬಾಷ್ ಲಲಿತಕಲಾ ಸಂಘ, ನಾಗನಾಥಪುರ ಕಲಾವಿದರು ದೆಹಲಿ ಕರ್ನಾಟಕ ಸಂಘದಲ್ಲಿ ಜನವರಿ 15ರಂದು 'ಮಂಗ ಮಾಣಿಕ್ಯ ಪ್ರಹಸನ' ನಾಟಕವನ್ನು ಪ್ರದರ್ಶಿಸಿದರು. ಅಯೋಗ್ಯರ ಕೈಯಲ್ಲಿ ಆಡಳಿತ ಕೊಟ್ಟರೆ ಆಡಳಿತ ಹಾಳಾಗುತ್ತದೆ ಎಂಬುದನ್ನು 'ಮಂಗ ಮಾಣಿಕ್ಯ ಪ್ರಹಸನ' ನಾಟಕ ಪ್ರತಿಬಿಂಬಿಸಿತು. ಆಳುವವರು ನಿಷ್ಠೆಯಿಂದ ಮತ್ತು ಕಾಳಜಿಯಿಂದ ಜನತೆಯನ್ನು ನೋಡಿಕೊಳ್ಳಬೇಕು. ಇಲ್ಲವಾದರೆ ಅಯೋಗ್ಯರು ಆಡಳಿತವನ್ನು ಕೈಗೆ ತೆಗೆದುಕೊಳ್ಳುತ್ತಾರೆ ಎಂಬ ಪ್ರಸ್ತುತ ರಾಜಕೀಯ ವಾಸ್ತವತೆಯನ್ನು ಪರಿಣಾಮಕಾರಿಯಾಗಿ ದೆಹಲಿಯ ಕನ್ನಡಿಗರಿಗೆ ಕಲಾವಿದರು ನಿರೂಪಿಸಿದರು.

ಭಾರತದ ಒಂದು ಸಣ್ಣ ಸಂಸ್ಥಾನವನ್ನು ಉದಾಹರಣೆಯಾಗಿ ತೆಗೆದುಕೊಂಡು ಈ ನಾಟಕವು ಬೆಳೆಯಿತು. ಆಡಳಿತ ನಡೆಸಲು ಸೂಕ್ತ, ಯೋಗ್ಯ ವ್ಯಕ್ತಿಗಳೋ ಅಲ್ಲವೋ ಎಂಬುದನ್ನು ಮುಖ್ಯವಾಗಿ ಮನಗಾಣದೆ ಸ್ವಾರ್ಥದಿಂದ ಕುಟುಂಬದವರಿಗೇ ಮಣೆಹಾಕುವ ಇಂದಿನ ರಾಜಕಾರಣವನ್ನು ವಿಡಂಬನಾತ್ಮಕವಾಗಿ ಪ್ರತಿಬಿಂಬಿಸಿತು. ಶ್ರೀನಿವಾಸ ಮೇಷ್ಟ್ರು ನಿರ್ದೇಶಿಸಿದ ಈ ನಾಟಕ ದೆಹಲಿ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಯಿತು. ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಂಘದ ಸ್ಮರಣಿಕೆ ಹಾಗೂ ಹೂಗುಚ್ಛ ನೀಡಿ ಕಲಾವಿದರನ್ನು ಹುರಿದುಂಬಿಸಿದರು. ಕೋಶಾಧಿಕಾರಿ ಡಾ. ವೈ ಅವನೀಂದ್ರನಾಥ್ ರಾವ್ ಅವರು ವಂದಿಸಿದರು. ಮೋಟಾರು ವಾಹನಗಳ ಬಿಡಿಭಾಗಗಳನ್ನು ತಯಾರಿಸುವ ಬೆಂಗಳೂರಿನ ಮೈಕೋ ಕಂಪೆನಿಯು ಇದೀಗ ಬಹುರಾಷ್ಟ್ರೀಯ ಕಂಪೆನಿ ಬಾಷ್ ಆಗಿದೆ.

ಆ ಸಂಸ್ಥೆಯ ಕಾರ್ಮಿಕರ ಮತ್ತು ಕುಟುಂಬದವರ ಪ್ರತಿಭೆಯನ್ನು ಹಾಗೂ ಕಲೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ 1996ರಲ್ಲಿ ಲಲಿತಕಲಾ ಸಂಘವನ್ನು ಸ್ಥಾಪಿಸಲಾಯಿತು. ಲಲಿತಾ ಕಲಾ ಸಂಘವು ಪ್ರತಿವರ್ಷ ಅಂತರವಿಭಾಗ ನಾಟಕ ಸ್ಪರ್ಧೆ, ಛದ್ಮವೇಷ, ಹಾಡುಗಾರಿಕೆ, ರಂಗೋಲಿ ಮುಂತಾದ ಸ್ಪರ್ಧೆಗಳನ್ನು ನಡೆಸಿಕೊಂಡು ಬಂದಿದೆ. ಅ

**ಅಭಿಮತ ವರದಿ**

# ಪ್ರಕಟಣೆಗಳು

## ಕೆ.ಆರ್. ನಾಗರಾಜ ನೆನಪಿನ ವಿದ್ಯಾರ್ಥಿ ವೇತನ ನಿಧಿ ರೂ. 10 ಲಕ್ಷಕ್ಕೆ ಹೆಚ್ಚಳ

ದೆಹಲಿ ಕರ್ನಾಟಕ ಸಂಘ ಪ್ರತಿ ವರ್ಷ ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ದಿ.ಕೆ.ಆರ್.ನಾಗರಾಜ ನೆನಪಿನಲ್ಲಿ ನೀಡುತ್ತಿರುವ ವಿದ್ಯಾರ್ಥಿ ವೇತನ ನಿಧಿಯಲ್ಲಿ 1.75 ಲಕ್ಷ ರೂಪಾಯಿಗಳಿದ್ದು. ಈ ನಿಧಿಯ ಆದಾಯದ ಜೊತೆ ಸಂಘದ ಕೊಡುಗೆಯನ್ನು ಸೇರಿಸಿ ಪ್ರತಿ ವರ್ಷವೂ ಅರ್ಹತೆಯ ಹಾಗೂ ಅವಶ್ಯಕತೆಯ ಆಧಾರದ ಮೇಲೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.

ಫಲಾನುಭವಿಗಳ ಸಂಖ್ಯೆ ಅಧಿಕವಿರುವುದನ್ನು ಗಮನದಲ್ಲಿಟ್ಟುಕೊಂಡು ಸಂಘವು ಈ ನಿಧಿಯ ಮೊತ್ತವನ್ನು ಕನಿಷ್ಠ ರೂ. 10 ಲಕ್ಷದವರೆಗೆ ವಿಸ್ತರಿಸುವ ಯೋಚನೆ ಹೊಂದಿದೆ. ಈ ಕಾರ್ಯದಲ್ಲಿ ತಮ್ಮ ಸಹಾಯ ಅತ್ಯಮೂಲ್ಯವಾಗಿದ್ದು ದೇಣಿಗೆಯನ್ನು ನೀಡಿ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ತಮ್ಮ ದೇಣಿಗೆಯನ್ನು ದೆಹಲಿ ಕರ್ನಾಟಕ ಸಂಘದ ಹೆಸರಿಗೆ ಡಿಡಿ/ಚೆಕ್ ಮೂಲಕ ಕಳಹಿಸಬಹುದು. ಈ ದೇಣಿಗೆಗೆ ಆದಾಯ ತೆರಿಗೆ ವಿನಾಯಿತಿ (80–ಜಿ) ಇದೆ.

ಸಿ.ಎಂ. ನಾಗರಾಜ
ಪ್ರಧಾನ ಕಾರ್ಯದರ್ಶಿ

## ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರುಗಳ ನೆನಪಿನಲ್ಲಿ ವಿದ್ಯಾರ್ಥಿ ವೇತನ

ದೆಹಲಿ ಕರ್ನಾಟಕ ಸಂಘದ ಪ್ರಾರಂಭದ ದಿನಗಳಲ್ಲಿ ಸಂಘದ ಬೆಳವಣಿಗೆಗಾಗಿ ಶ್ರಮಿಸಿದ ಅಧ್ಯಕ್ಷರುಗಳಾದ ದಿ. ಶ್ರೀ ನರಹರಿರಾವ್ (1948–50) ದಿ. ಶ್ರೀ ಎ.ವಿ.ಪೈ (1950–52) ದಿ. ಶ್ರೀ ಡಾ. ವಿ.ಕೆ.ಆರ್.ವಿ. ರಾವ್ (1952–54), ದಿ. ಶ್ರೀ ರಾಘವನ್ (1954–58) ದಿ. ಶ್ರೀ ವಿ. ಕೃಷ್ಣಮೂರ್ತಿ ರಾವ್ (1958–66) ಅವರ ಸ್ಮರಣಾರ್ಥ ಒಬ್ಬ ವಿದ್ಯಾರ್ಥಿಗೆ 5000/– ರೂಪಾಯಿಗಳ ವಿದ್ಯಾರ್ಥಿ ವೇತನ ನೀಡಲು ಕಾರ್ಯಕಾರಿ ಸಮಿತಿ ನಿರ್ಧರಿಸಿದೆ. ಸಂಘವನ್ನು ಕಟ್ಟಿ ಬೆಳೆಸಿದ ಹಿರಿಯ ಚೇತನಗಳನ್ನು ಪ್ರತಿ ವರ್ಷವೂ ನೆನಪಿಸಿಕೊಳುವ ನಿಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘವು ವಿದ್ಯಾರ್ಥಿ ವೇತನ ನಿಧಿಯೊಂದನ್ನು ಸ್ಥಾಪಿಸಿವ ಪ್ರಯತ್ನ ನಡೆಸುತ್ತಿದೆ.

## ಸಂಗೀತ ತರಬೇತಿ

ಮಾರ್ಚ್ 27,28,29ರಂದು ಖ್ಯಾತ ಗಾಯಕಿ ನಾಡೋಜ ಡಾ. ಬಿ.ಕೆ.ಸುಮಿತ್ರ ಮತ್ತು ಎದೆ ತುಂಬಿ ಹಾಡಿದೆನು ಖ್ಯಾತಿಯ ಸಂಗೀತ ನಿರ್ದೇಶಕ ಶ್ರೀ ಬಿ.ವಿ. ಶ್ರೀನಿವಾಸ್ ಅವರಿಂದ ಕನ್ನಡದ ಚಲನಚಿತ್ರ ಗೀತೆಗಳ ಹಾಡುಗಾರಿಕೆ ತರಬೇತಿ ನೀಡಲಾಗುವುದು. ತರಬೇತಿಯಲ್ಲಿ ಪಾಲ್ಗೊಳ್ಳಲು ಆಸಕ್ತಿಯುಳ್ಳವರು ಮಾರ್ಚ್ 15ರೊಳಗೆ ಸಂಘದ ಕಾರ್ಯಾಲಯದಲ್ಲಿ ತಮ್ಮ ಹೆಸರನ್ನು ನೊಂದಾಯಿಸಬೇಕಾಗಿ ವಿನಂತಿ.

## ದೆಹಲಿ ಕರ್ನಾಟಕ ಸಂಘದಲ್ಲಿ ಕರ್ನಾಟಕ ಪರಂಪರೆಯ ವಸ್ತುಗಳು

ಕರ್ನಾಟಕದಲ್ಲಿ ದೈನಂದಿನ ಬಳಕೆಗೆ ಉಪಯೋಗಿಸುವ ಈ ಕೆಳಗಿನ ವಸ್ತುಗಳು ದೆಹಲಿ ಕರ್ನಾಟಕ ಸಂಘದ ಕರ್ನಾಟಕ ಫುಡ್ ಸೆಂಟರ್‌ನಲ್ಲಿ ದೊರೆಯುವಂತೆ ಮಾಡಲಾಗಿದೆ.

ಬಾರ್ಲಿ ರೊಟ್ಟಿ, ಜೋಳದ ರೊಟ್ಟಿ, ಉತ್ತರ ಕರ್ನಾಟಕದ ಚಟ್ನಿ, ಕೋರಿ ರೊಟ್ಟಿಗೆ ಬಳಸಲಾಗುವ ಮಂಗಳೂರು ರೊಟ್ಟಿ, ಕುಚ್ಲು ಅಕ್ಕಿ, ರಾಗಿ ಹಿಟ್ಟು, ಅಕ್ಕಿ ಹಿಟ್ಟು, ಇಡ್ಲಿ ರವೆ, ಅವಲಕ್ಕಿ, ಅಚ್ಚು ಬೆಲ್ಲ, ಓಲೆ ಬೆಲ್ಲ, ಮೆಣಸಿನ ಹುಡಿ, ಬ್ಯಾಡಗಿ ಮೆಣಸು, ಸಂಡಿಗೆ ಮೆಣಸು, ಬಿಸಿಬೇಳೆ ಬಾತ್ ಮಸಾಲ, ಪುಳಿಯೋಗರೆ ಮಸಾಲ, ಕಾಫಿಪುಡಿ, ಅರಿಸಿಣ, ಕುಂಕುಮ, ಅಗರಬತ್ತಿ , ಹೋಳಿಗೆ, ಬನಾನ ಹಲ್ವ, ಮೈಸೂರ್‌ಪಾಕ್, ಬೂಂದಿ ಲಡ್ಡು, ನಮಕಿನ್, ಬಾಳೆಕಾಯಿ ಚಿಪ್ಸ್, ಹಪ್ಪಳ, ಸಂಡಿಗೆ, ಉಪ್ಪಿನಕಾಯಿ

ಕರ್ನಾಟಕದ ಸಿಲ್ಕ್ ಸೀರೆ, ಪಂಚೆ, ಶಾಲು, ಕಾಟನ್ ಶರ್ಟ್ ಇತ್ಯಾದಿ.

## ನೃತ್ಯ ತರಬೇತಿ

ಕರ್ನಾಟಕ ಸಂಘದಲ್ಲಿ ಭರತನಾಟ್ಯ, ಜಾನಪದ ಮತ್ತಿತರ ನೃತ್ಯ ಪ್ರಕಾರಗಳ ತರಬೇತಿ ಆರಂಭಿಸಲಾಗುವುದು. ಆಸಕ್ತಿಯುಳ್ಳವರು ತಮ್ಮ ಹೆಸರನ್ನು ಸಂಘದ ಕಚೇರಿಯಲ್ಲಿ ನೊಂದಾಯಿಸಬೇಕಾಗಿ ವಿನಂತಿ.

# ನೆರಳು

ಹಿಂತಿರುಗಿ ನೋಡಿದರೆ
ಒಮ್ಮೆ ಹಿಗ್ಗುವ
ಒಮ್ಮೆ ಕುಗ್ಗುವ
ಅವಲೋಕನ

ದಿನಾದಿಯಲ್ಲಿ ಬೆಳೆದ ಸೊಬಗು
ಮಧ್ಯಾಹ್ನ ಕುಸಿದು ಸೊರಗಿ
ಹಿರಿದು ಮತ್ತೆ ಕಣ್ಮುಂದೆ
ಸಂಜೆ ಕ್ಷೀಣ

ಮುನ್ನಡೆವ ಹಾದಿಯಲಿ
ಹಿಂಬಾಲಿಸಿ ಬರುತಿದೆ
ಬಿರು ಬಿಸಿಲಲ್ಲೂ
ತಂಪಾದ ನಿನ್ನದೇ ಛಾಯೆ





# ಕಾಣದ ಬೆಂಕಿ

ದೇಹದ ಜ್ವಾಲೆಯು
ಪರಿತಾಪದಿ ಉರಿದು
ಹೃದಯದ ಬಾಗಿಲು ಮುಚ್ಚಿದೆ

ಹಣೆಗೆ ಚುಂಬಿಸಿ
ತೆರಳುವ ಘಳಿಗೆ
ನಿಧಾನದಿ ಸರಿಯಲಿ
ಬರಲಿ ಪವಿತ್ರ ಕ್ಷಣಗಳು

ಹೊಸ್ತಿಲ ದಾಟಿ
ಹೊರಡುವ ವೇಳೆ
ಸಾವರಿಸಿಕೋ
ಪಿಸು ಮಾತುಗಳ ಬದಿಗೆ ಸರಿಸಿ

ನನ್ನುಸಿರ ಬಿಗಿಗೊಳಿಸಿ ಕುದಿವ
ಅಗ್ನಿಯ ನಂದಿಸಲಿ
ಈಡೇರುತ
ಉತ್ಕಟ ಬಯಕೆಗಳು

ಎಲ್ಲ ಮುಗಿದೂ
ಏನೂ ಆಗಿಲ್ಲ ಎನುವ
ನಿನ್ನ ಬರಿದ ನೇತ್ರಗಳು
ಅಲ್ಲವೇ
ಕಾತರವ ಕಾದಿಡುವ ಸಂಚು.



# ಒಂದು ಹಳದಿ ಹೂವು

ನನ್ನರಿವಿಗೆ ಬರುವ
ಮೊದಲು ಅವಳು
ಹೂವಾಗಿರಲಿಲ್ಲ
ಕಾಂತಿಯಿರಲಿಲ್ಲ

ನನ್ನನುಭಕ್ಕೆ ಬರುವ
ಮೊದಲು ಅವಳು
ಹೂವಾಗಿರಲಿಲ್ಲ
ಕಂಪಿರಲಿಲ್ಲ

ಈಗ ಬೆಳಕಿಲ್ಲ
ಪರಿಮಳವೂ ಇಲ್ಲ
ಸಂಜೆಯಾಗಿದೆ
ಎಂದಿನಂತೆ



ಡಾ. ವೈ. ಅವನೀಂದ್ರನಾಥ್ ರಾವ್

# ಸಫಲತೆಯ ರಾಜಪಥದಲ್ಲಿ ಸಫಲ್ ಮಾಣಕಾಪುರೆ



**ದೆಹಲಿಯ ರಾಜಪಥದಲ್ಲಿ ಗಣರಾಜ್ಯೋತ್ಸವದ ಸಂದರ್ಭದಲ್ಲಿ ನಡೆಯುವ ಪೆರೇಡ್‌ನಲ್ಲಿ ಹೂವುಗಳಿಂದ ನಿರ್ಮಿತವಾದ ಟ್ಯಾಬ್ಲೋಗಳನ್ನು ಹಲವು ವರ್ಷಗಳಿಂದ ರಚಿಸಿ ಜನಮನ್ನಣೆಗೆ ಪಾತ್ರರಾಗಿರುವ ಕಲಾವಿದ ಸಫಲ್ ಮಾಣಕಾಪುರೆ ಅವರನ್ನು ಸಂದರ್ಶಿಸಿ ಅಭಿಮತಕ್ಕಾಗಿ ವಿಶೇಷ ಲೇಖನ'ವನ್ನು ಸವಿತಾ ಇನಾಮದಾರ್ ಅವರು ಬರೆದಿದ್ದಾರೆ.**




ಯಾವುದೇ ಕಲಾವಿದನ ಕಲೆಗೆ ಬೆಲೆ ಹಾಗೂ ನೆಲೆ ಸಿಗಬೇಕೆಂದಾದರೆ ಆತನ ಕಲೆಯಲ್ಲಿ ಮಾಂತ್ರಿಕನಂತೆ ಮನಸೆಳೆಯುವ ಚುಂಬಕ ಶಕ್ತಿ ಇರಬೇಕು. ಚಿತ್ರ ಮೌನವಾದರೂ ಕಥೆ ಹೇಳುವಂತಿರಬೇಕು. ಅವನ ಚಾಣಿ ಬಂಡೆಗಲ್ಲಿನಲ್ಲೂ ಸಹ ಜೀವಕಳೆ ತುಂಬಿದ ಮೂರ್ತಿಯನ್ನು ಸೃಷ್ಟಿಸುವಂತಿರಬೇಕು. ಹೀಗಾದಾಗ ಮಾತ್ರ ಆತನ ಕಠಿಣ ಶ್ರಮಕ್ಕೆ ಫಲ ಸಿಗುವುದು. ಆತನ ಯಶಸ್ಸಿನ ಹೊತ್ತಿಗೆಯಲ್ಲಿ ಮತ್ತೊಂದು ಸಫಲತೆಯ ಕಥೆ ಸಾರುವ  ಪುಟ ಸೇರಿದಂತಾಗುವುದು. ಇದಕ್ಕೆ ನಿದರ್ಶನ  ಸೃಜನಶೀಲತೆಯ ಆಗರವಾಗಿರುವ ದೆಹಲಿಯಲ್ಲಿ ವಾಸಿಸುತ್ತಿರುವ ಕರ್ನಾಟಕದ ಬೆಳಗಾವಿಯವರಾದ ಸಫಲ್ ಮಾಣಕಾಪುರೆ.

ಸಫಲ್ ಅವರ ತಂದೆ ದಿವಂಗತ ಎ.ಬಿ. ಮಾಣಕಾಪುರೆಯವರು ಅತ್ಯಂತ ಶ್ರೇಷ್ಠ ಕಲಾವಿದರು. ಉತ್ತಮ ಚಿತ್ರ ಕಲಾವಿದರಷ್ಟೇ ಅಲ್ಲದೆ ಅವರು 23 ವರ್ಷಗಳವರೆಗೆ ದೆಹಲಿಯಲ್ಲಿ ಗಣರಾಜ್ಯೋತ್ಸವಕ್ಕಾಗಿ ಹೂವುಗಳ ಅನೇಕ ಸ್ತಬ್ಧಚಿತ್ರಗಳನ್ನು ವಿನ್ಯಾಸಗೊಳಿಸಿ ರಚಿಸಿದ್ದಾರೆ. ಚಿಕ್ಕಂದಿನಿಂದಲೇ ತಂದೆಯ ಜೊತೆಗೆ ಅವರ ಸಹಾಯಕನಾಗಿ, ಮಾರ್ಗದರ್ಶನ ಪಡೆಯುತ್ತ, ಪ್ರತಿಯೊಂದು ಕೆಲಸದ ಅಂಗುಲಂಗುಲದ ಪರಿಚಯ ಪಡೆದ ಸಫಲ್, ತಂದೆಯ ನಿಧನದ ನಂತರ ಸ್ವತಂತ್ರವಾಗಿ ತಮ್ಮದೇ ಆದ ತಂಡದೊಡನೆ ಸ್ತಬ್ಧಚಿತ್ರಗಳನ್ನು ನಿರ್ಮಿಸಲು ಪ್ರಾರಂಭಿಸಿದರು.

ಸಫಲ್ ಅವರು ಕಾಲೇಜಿನ ದಿನಗಳಲ್ಲಿ ಅನೇಕ ರೀತಿಯ ವಾಟರ್ ಕಲರ್ ಪೇಂಟಿಂಗ್‌ಗಳನ್ನು ರಚಿಸಿದ್ದಾರೆ.  ಫೋಟೋಗ್ರಾಫಿಯಲ್ಲಿ ವಿಶೇಷ ಪದವಿಯನ್ನು ಪಡೆದ ಬಳಿಕ ಅನೇಕ ಪತ್ರಿಕೆಗಳಲ್ಲಿ ಇಲ್ಲಸ್ಟ್ರೇಟರ್ ಆಗಿ ಕೆಲಸ ಮಾಡಿದ್ದಾರೆ. 1990ರಲ್ಲಿ ಇವರ 'ಇನೋಸೆಂಟ್ ಡ್ರೀಮ್' ಎಂಬ ಛಾಯಾಚಿತ್ರಕ್ಕೆ ಸಾಹಿತ್ಯ ಕಲಾ ಪರಿಷತ್ತಿನಿಂದ ಪ್ರಶಸ್ತಿ ದೊರೆತಿದೆ.

ಭಾರತದಾದ್ಯಂತ ಫೋಟೋಗ್ರಾಫಿಯ ಹಾಗೂ ಚಿತ್ರಕಲೆಯ ಅನೇಕ ಪ್ರದರ್ಶನಗಳನ್ನು ನೀಡಿ ಬಹಳಷ್ಟು ಪ್ರಶಸ್ತಿಗಳನ್ನು ಪಡೆದಂತಹ  ಸಫಲ್ ಅವರು ಕೆಲವು ತಿಂಗಳ ಹಿಂದೆ ದೆಹಲಿ ಕರ್ನಾಟಕ ಸಂಘದಲ್ಲಿಯೂ ತಮ್ಮ ತೈಲವರ್ಣ ಚಿತ್ರಗಳ ಪ್ರದರ್ಶನ ನಡೆಸಿ ಉತ್ತಮ ಚಿತ್ರಕಲಾವಿದ ಎಂದು ಸಾಬೀತು ಪಡಿಸಿದ್ದಾರೆ. ಕನಸುಗಳ ಬೆನ್ನು ಹತ್ತಿ, ಬಣ್ಣಗಳೊಡನೆ ಸರಸವಾಡುವುದೆಂದರೆ ಇವರಿಗೆ ಬಲು ಇಷ್ಟ. ಪ್ರತಿ ಬಾರಿಯೂ ಹೊಸ ಹೊಸ ವಿಷಯಗಳ ಮೇಲೆ ಮಾಡೆಲ್ಲುಗಳನ್ನು ತಯಾರಿಸಿ, ಅದಕ್ಕೆ ಸರಿಹೊಂದುವಂತೆ ಹದಿನೈದರಿಂದ ಇಪ್ಪತ್ತು ಕ್ವಿಂಟಲುಗಳಷ್ಟು ವಿವಿಧ ಬಣ್ಣದ ಹೂವುಗಳಿಂದ ವಿನ್ಯಾಸಗಳನ್ನು ರಚಿಸುವ ಮಾಂತ್ರಿಕತೆ ಸಫಲ್ ಅವರಲ್ಲಿದೆ. ಅವರು ರಚಿಸಿದ ಹೂವಿನ ಸ್ತಬ್ಧಚಿತ್ರಗಳು, ಗಣರಾಜ್ಯೋತ್ಸವದ ಸಂದರ್ಭದಲ್ಲಿ ದೇಶದ ರಾಜಧಾನಿಯ ರಾಜಪಥದಲ್ಲಿ ಗಜ ಗಾಂಭೀರ್ಯದಿಂದ ಪ್ರದರ್ಶನಗೊಳ್ಳುತ್ತವೆ. ಅವರ ನಿರ್ಮಾಣದ ಅನೇಕ ರಾಜ್ಯಗಳ ಸ್ತಬ್ಧಚಿತ್ರಗಳನ್ನು ಕಣ್ಣಿನಿಂದ ನೋಡುತ್ತಾ ಮನದಲ್ಲಿ ನವ ಚೈತನ್ಯವನ್ನು ನೀಡುತ್ತವೆ.

ಸುಂದರವಾದ ಅಂದಚಂದದ ಹೂವುಗಳ ಟ್ಯಾಬ್ಲೋಗಳ ಹಿಂದೆ ಅಡಗಿದ ಪರಿಶ್ರಮದ ಮಹಿಮೆ ಅರಿಯಬೇಕಾದರೆ ಅವರು ಅದರ ತಯಾರಿ ನಡೆಸುವ ಸ್ಥಳಕ್ಕೆ ಭೇಟಿ ನೀಡಬೇಕು. ಇದೇ ಜನವರಿ 25ರಂದು ಅವರನ್ನು ನಾವು ಭೇಟಿಯಾದಾಗ ಅವರು ಕೇಂದ್ರದ ಲೋಕೋಪಯೋಗಿ ಇಲಾಖೆಗೆ (ಸೆಂಟ್ರಲ್ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್–ಸಿಪಿಡಬ್ಲ್ಯುಡಿ) ಹೂವಿನ ಸ್ತಬ್ಧಚಿತ್ರದ ನಿರ್ಮಾಣದ ಕಾರ್ಯದಲ್ಲಿ ತೊಡಗಿದ್ದರು. ಆರೇಳು ತಿಂಗಳುಗಳಿಂದ ಹೊಸ ಹೊಸ ವಿಷಯಗಳ ಮಾದರಿಯನ್ನು ತಯಾರಿಸಿ, ಆ ವಿಷಯಕ್ಕೆ ಸೂಕ್ತವಾದ ವಿವಿಧ ಆಕಾರಗಳನ್ನು ನಿರ್ಮಿಸುವ ಯೋಜನೆ ಹಾಕಬೇಕು. ನಂತರ ಅವುಗಳನ್ನು ತಯಾರಿಸಲು ತಗಲಬಹುದಾದ ವಿವಿಧ ಬಣ್ಣದ ಹೂವುಗಳು, ಅವುಗಳನ್ನು ಎಷ್ಟು ಮತ್ತು ಎಲ್ಲಿಂದ ತರಿಸಬೇಕು ಎಂದೆಲ್ಲಾ ಲೆಕ್ಕಾಚಾರ ಮಾಡಬೇಕಾಗುತ್ತದೆ.

ಈ ಬಾರಿಯ ಸ್ತಬ್ಧಚಿತ್ರದ ವಿಷಯ 'ರಾಜಪಥದ ಮೇಲೆ ರಾಜಪಥ' ಎಂದಾಗಿತ್ತು. ಇದಕ್ಕೆ ತಗಲುವ ಕೋಟ್ಯಾನುಗಟ್ಟಲೆ ವಿವಿಧ ಬಣ್ಣದ ಹೂವುಗಳ ಹಾಗೂ ಎಲೆಗಳ ರಾಶಿಯನ್ನು ನೋಡಿ ದಂಗಾಗಿ ಬಿಟ್ಟೆವು. ದೇಶದ ವಿವಿಧ ಭಾಗಗಳ ಸರಕಾರೀ ನರ್ಸರಿಗಳಿಂದ, ಪ್ರತಿಯೊಬ್ಬ ತೋಟಗಾರನ ಪ್ರೀತಿಯ ಸಿಂಚನದಿಂದ ಸುವಾಸನೆಯನ್ನು ಬೀರುವ ಸುಂದರ, ಸುಕೋಮಲ ಕುಸುಮಗಳನ್ನು ಕಂಡಾಗ ಅವರ ಹಗಲಿರುಳಿನ ಪ್ರಯಾಸಕ್ಕೆ ತಕ್ಕ ಬೆಲೆ ಇಲ್ಲಿ ಸಿಗುತ್ತಿರುವ ಅನುಭವವಾಯಿತು. ಅತ್ಯಂತ ಮುತುವರ್ಜಿಯಿಂದ ಒಂದೊಂದು ಹೂವನ್ನು ಹಾಗೂ ಮೊಗ್ಗುಗಳನ್ನು ಅತಿ ನಾಜೂಕಿನಿಂದ, ನಲುಗದಂದತೆ, ಬಾಡದಂತೆ ಆಯಾ ಆಕೃತಿಗಳ ಮೇಲಿದ್ದ ಮಾಸ್ ಗ್ರಾಸ್ ಮೇಲೆ ಸಿಂಗರಿಸುತ್ತಿರುವ ಸಾವಿರಾರು ತೋಟಗಾರನ್ನು ಕಂಡು ಬೆರಗಾದೆವು.

ಕೆಲಸಗಾರರೊಂದಿಗೆ ಪ್ರತಿಕ್ಷಣವೂ ಇದ್ದು ಎಲ್ಲವೂ ಸರಿಯಾಗಿ ನಡೆದಿದೆಯೋ ಇಲ್ಲವೋ ಎಂದು ಉಸ್ತುವಾರಿ ಮಾಡುತ್ತಿದ್ದ ಸಫಲ್ ಇದನ್ನು ನೋಡಲೆಂದು ನಮ್ಮ ಹಾಗೆ ಬಂದ ಅದೆಷ್ಟೋ ಜನರು ಕೇಳಿದ ವಿಷಯಗಳನ್ನೆಲ್ಲಾ ವಿವರಿಸುತ್ತಾ, ಜೊತೆಗೆ ಭದ್ರತೆಯ ಕಡೆಗೂ ಗಮನ ಹರಿಸುತ್ತಾ ಇರುವುದನ್ನು ನೋಡಿದೆವು. ಸ್ತಬ್ಧಚಿತ್ರದಲ್ಲಿ ಕುಳಿತುಕೊಳ್ಳುವ ಮಕ್ಕಳನ್ನು ಎಲ್ಲರಿಗೂ ಪರಿಚಯಿಸಿದಾಗ ಆ ಮಕ್ಕಳ ಮುಖದಲ್ಲಿ ಹೆಮ್ಮೆಯಿತ್ತು. ಇನ್ನೊಂದೆಡೆ, ವಿದೇಶಿ ಪ್ರವಾಸಿಗರ ಹಿಂಡು ಈ ಹೂವುಗಳ ಸರದಾರನನ್ನು ನೋಡಿ ಆನಂದದಿಂದ ಕೈಕುಲುಕುತ್ತಾ ಇದ್ದರು. ಕೆಲಸದ ಒತ್ತಡ ಎಷ್ಟೇ ಇದ್ದರೂ ನಮ್ಮೊಂದಿಗಿದ್ದು, ಕೇಳಿದ ಪ್ರಶ್ನೆಗಳಿಗೆ ಮಂದಹಾಸ ಬೀರುತ್ತಾ ಚೆನ್ನಾಗಿ ವಿವರಿಸಿದರು.

ಪತಿಯ ಹಾಗೆ ಮಗನೂ ಅವರ ಕಲಾ ಸಾಮ್ರಾಜ್ಯವನ್ನು ಎಲ್ಲೆಡೆಗೂ ವಿಸ್ತರಿಸುತ್ತಿರುವುದನ್ನು ನೋಡಿ ಕಂಗಳು ತುಂಬಿ ಬಂದರೂ ತೋರಗೊಡದೆ ನಮ್ಮ ಜೊತೆಗೆ ಓಡಾಡುತ್ತಿದ್ದ ಸಫಲ್ ಅವರ ತಾಯಿಯ ಹೆಮ್ಮೆಯ ಮುಖವನ್ನು ನೋಡಿದಾಗ ನಮಗೂ ಆನಂದವಾಯಿತು. ತಂದೆಯ ನೆರಳಿನಂತೆ ಅಲ್ಲಿ ಇಲ್ಲಿ ಓಡಾಡುತ್ತಾ, ಚಿಕ್ಕ ಪುಟ್ಟ ಕೆಲಸ ಮಾಡುತ್ತಿದ್ದ ಅವರ ಮುದ್ದಿನ ಮೊಮ್ಮಕ್ಕಳನ್ನು ನೋಡಿ, 'ತಾತ ನೆಟ್ಟ ಗಿಡಕ್ಕೆ ನೀರು ಹಾಕುತ್ತಿರುವ ಕೈಗಳು' ಎಂದು ಆಕೆ ಹೇಳಿದಾಗ ಈ ಪುಟ್ಟ ಕುಟುಂಬದ ಬಗ್ಗೆ ಇನ್ನಷ್ಟು ಗೌರವ ಹೆಚ್ಚಿತು. ಒಗ್ಗಟ್ಟಿದ್ದರೆ ಬಲ ಇಮ್ಮಡಿಯಾಗುತ್ತದೆ ಅನ್ನೋದರಲ್ಲಿ ಸಂದೇಹವೇ ಇಲ್ಲ.

ಸಫಲ್ ಅವರ ಪತ್ನಿ ನಯನಾ ಮಾಣಕಾಪುರೆ ಪತಿಯ ಅನುವು ತನುವನ್ನು ಅರ್ಥಮಾಡಿಕೊಂಡು ಅವರ ಭುಜಕ್ಕೆ ಭುಜ ಕೊಟ್ಟು ನಸುನಗೆ ಬೀರುತ್ತಾ, ಮನೆ ಹಾಗೂ ಮಕ್ಕಳ ಜೊತೆಗೆ ಪತಿಗೂ ಸಹಾಯ ಮಾಡುವ ಉತ್ಸಾಹದ ಚಿಲುಮೆ. ದೆಹಲಿಯ ಕನ್ನಡ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಕ್ರಿಯಾಶೀಲರಾಗಿ ಭಾಗವಹಿಸುವ ನಯನಾ, ದೆಹಲಿ ಕರ್ನಾಟಕ ಸಂಘ ಮತ್ತು ಜನಕಪುರಿ ಮಹಿಳಾ ಮಂಡಳಿಯ ಸಕ್ರಿಯ ಸದಸ್ಯೆ ಕೂಡಾ.

ಪ್ರತಿ ಬಾರಿ 'ಅತ್ಯುತ್ತಮ ಟ್ಯಾಬ್ಲೋ' ಎಂಬ ಪ್ರಶಸ್ತಿಯನ್ನು ರಾಷ್ಟಪತಿ ಭವನದಲ್ಲಿ ರಕ್ಷಣಾ ಮಂತ್ರಿಯವರ ಹಸ್ತದಿಂದ ಪಡೆಯುವ ಸಫಲ್ ಮಾತಿಗಿಂತ ಕೃತಿಯಲ್ಲಿ ನಂಬಿಕೆಯಿಟ್ಟ ವ್ಯಕ್ತಿ. ಸಫಲ್ ನಿರ್ಮಿಸಿದ ಸ್ತಬ್ಧಚಿತ್ರಕ್ಕೆ ಹಿಂದೆ ಅದೆಷ್ಟೋ ಬಾರಿ ಪ್ರಥಮ ಸ್ಥಾನ ಬಂದಿದೆ. ಅದರೆ ಕಳೆದ ಏಳು ವರ್ಷಗಳಿಂದ ಮಾತ್ರ ನಿರಂತರವಾಗಿ ಅವರೇ ನಿರ್ಮಿಸಿದ ಸಿಪಿಡಬ್ಲ್ಯುಡಿಯ ತೋಟಗಾರಿಕೆ ವಿಭಾಗದ ಹೂವುಗಳ ಟ್ಯಾಬ್ಲೋಗಳಿಗೆ 'ಅತ್ಯುತ್ತಮ ಟ್ಯಾಬ್ಲೋ ಪ್ರಶಸ್ತಿ' ಬರುತ್ತಿದೆ. ಈ ಬಾರಿಯ ಅಂದರೆ 2014ರ ಟ್ಯಾಬ್ಲೋಗೇ ಮತ್ತೆ ಪ್ರಥಮ ಸ್ಥಾನ ದೊರೆತಿದೆ ಎಂದು ತಿಳಿದಾಗ ಅವರಷ್ಟೇ ಸಂತೋಷ ನಮಗೂ ಆಯಿತು. ನಿರಂತರ ಲಭಿಸುತ್ತಿರುವ ಸಫಲತೆಯ ಮತ್ತನ್ನು ನೆತ್ತಿಗೇರಿಸಿಕೊಳ್ಳದೇ, ಸಫಲ್ ಹಾಗೂ ನಯನಾ ನಮ್ಮ ಅಭಿನಂದನೆಗಳನ್ನು ವಿನೀತರಾಗಿ ಸ್ವೀಕರಿಸಿದರು. ಅ

# ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಸ್ತಬ್ಧಚಿತ್ರ

ದೇಶದ ರಾಜಧಾನಿ ದೆಹಲಿಯ ರಾಜಪಥದಲ್ಲಿ ನಡೆದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕ ಸೇರಿ 13 ರಾಜ್ಯಗಳು, ಐದು ಸಚಿವಾಲಯಗಳ 18 ಸ್ತಬ್ಧಚಿತ್ರಗಳು ಪಾಲ್ಗೊಂಡಿದ್ದವು. ಕರ್ನಾಟಕ ಸರಕಾರದ ಅಪ್ರತಿಮ ಹೋರಾಟಗಾರ 'ಮೈಸೂರು ಹುಲಿ' ಟಿಪ್ಪು ಸುಲ್ತಾನ್ ಸ್ತಬ್ಧಚಿತ್ರ ನೆರೆದಿದ್ದವರ ಗಮನ ಸೆಳೆಯಿತು. ಕಲಾವಿದ ಶಶಿಧರ ಅಡಪ ಅವರ ಕಲ್ಪನೆಯಲ್ಲಿ ಈ ಸ್ತಬ್ಧಚಿತ್ರ ಮೂಡಿಬಂದಿದೆ. ಭದ್ರತೆ ಮತ್ತು ಗಣರಾಜ್ಯೋತ್ಸವದ ಅವಧಿಯನ್ನು ಕಡಿತ ಮಾಡುವ ದೃಷ್ಟಿಯಿಂದ ಸ್ತಬ್ಧಚಿತ್ರಕ್ಕಾಗಿ ಪ್ರತಿನಿಧಿಸುವ ರಾಜ್ಯಗಳ ಸಂಖ್ಯೆಯನ್ನು ಕಡಿತಗೊಳಿಸಲಾಗಿದೆ. ಆದರೂ ಸತತ ನಾಲ್ಕನೇ ಬಾರಿಗೆ ದೆಹಲಿಯಲ್ಲಿ ಕರ್ನಾಟಕದ ಸ್ತಬ್ಧಚಿತ್ರದ ಮೆರವಣಿಗೆ ನಡೆಸಲು ರಾಜ್ಯವು ಆಯ್ಕೆಯಾಗಿತ್ತು. ಕಳೆದ ವರ್ಷ ಕಿನ್ನಾಳ ಕಲೆಯ ಸ್ತಬ್ಧಚಿತ್ರವನ್ನು ಪ್ರದರ್ಶಿಸಲಾಗಿತ್ತು. 2012ರ ಗಣರಾಜ್ಯೋತ್ಸವದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಭೂತಾರಾಧನೆಯ ಸ್ತಬ್ಧ ಚಿತ್ರಕ್ಕೆ ದ್ವಿತೀಯ ಪ್ರಶಸ್ತಿ ದೊರೆತಿತ್ತು. 2011ರ ಗಣರಾಜ್ಯೋತ್ಸವ ಸ್ತಬ್ಧ ಚಿತ್ರದಲ್ಲಿ ಬೀದರ್‌ನ ಪಾರಂಪರಿಕ ಕಲೆಯಾದ ಬಿದರಿ ಸ್ತಬ್ಧಚಿತ್ರಕ್ಕೆ ತೃತೀಯ ಪ್ರಶಸ್ತಿ ದೊರೆತಿತ್ತು. 2006ರ ಕರ್ನಾಟಕದಲ್ಲಿ ನಡೆಯಲಿದ್ದ ವೈರಾಗ್ಯ ಮೂರ್ತಿ ಬಾಹುಬಲಿಯ ಮಹಾಮಸ್ತಕಾಭಿಷೇಕದ ಸ್ತಬ್ಧ ಚಿತ್ರಕ್ಕೆ ಪ್ರಥಮ ಪ್ರಶಸ್ತಿ ದೊರೆತಿತ್ತು. ಅ

***ಅಭಿಮತ ವರದಿ***







# ರಾಷ್ಟ್ರೀಯ ಶೌರ್ಯ ಪ್ರಶಸ್ತಿ ವಿಜೇತ ಬಾಲಕನಿಗೆ ಅಭಿನಂದನೆ

ಭಾರತದ ಗಣರಾಜ್ಯ ಉತ್ಸವದ ಸಂದರ್ಭದಲ್ಲಿ ರಾಷ್ಟ್ರೀಯ ಶೌರ್ಯ ಪ್ರಶಸ್ತಿ ಪಡೆದ ಕರ್ನಾಟಕದ ಮಾಸ್ಟರ್ ಎಸ್.ಎಸ್. ಮನೋಜ್ ಅವರನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಇದೇ ಜನವರಿ 27ರಂದು ಸನ್ಮಾನಿಸಲಾಯಿತು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಮತ್ತು ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಅವರು ಸಂಘದ ಸ್ಮರಣಿಕೆ ನೀಡಿ, ಶಾಲು ಮತ್ತು ಗಂಧದ ಹಾರದೊಂದಿಗೆ ಅಭಿನಂದಿಸಿ ಮನೋಜ್ ಅವರಿಗೆ ಶುಭಾಶಯವನ್ನು ಕೋರಿದರು.

ಕೇವಲ 13 ವರ್ಷದ ಹುಡುಗ, ತನ್ನ ಜೀವದ ಹಂಗು ತೊರೆದು ನೀರಿನಲ್ಲಿ ಮುಳುಗುತ್ತಿದ್ದ ಅಂಗವಿಕಲ ಮಹಿಳೆಯನ್ನು ರಕ್ಷಿಸಿರುತ್ತಾರೆ. ಹೆತ್ತವರೊಂದಿಗೆ ಮಂಡ್ಯ ಜಿಲ್ಲೆಯಲ್ಲಿರುವ ರಂಗನಾಥನ ದೇವಸ್ಥಾನಕ್ಕೆ ಭೇಟಿಕೊಟ್ಟ ಸಂದರ್ಭದಲ್ಲಿ ಮನೋಜ್ ಕಾವೇರಿ ನದಿಯಲ್ಲಿ ಈಜುತ್ತಿದ್ದರು. ಆ ವೇಳೆಯಲ್ಲಿ ಅಂಗವಿಕಲ ಮಹಿಳೆಯೊಬ್ಬರು ನೀರಿನಲ್ಲಿ ಬಿದ್ದ ಬಟ್ಟೆಯನ್ನು ತೆಗೆಯಲು ಹೋದಾಗ ಜಾರಿಬಿದ್ದು 70 ಅಡಿ ಮುಂದೆ ಹೋಗಿದ್ದರು. ತನ್ನ ಜೀವದ ಹಂಗು ತೊರೆದು ಈಜಿಕೊಂಡು ಹೋಗಿ ಆ ಮಹಿಳೆಯನ್ನು ಮನೋಜ್ ಪ್ರಾಣಾಪಾಯದಿಂದ ರಕ್ಷಿಸಿದ್ದಾರೆ.

ಮೂಲತಃ ಮೈಸೂರಿನವರಾದ ಇವರು ಶ್ರೀ ಎಸ್.ಟಿ. ರಾಜಶೇಖರ್ ಮತ್ತು ಶ್ರೀಮತಿ ಎಸ್. ಕೆ. ಆರತಿ ಅವರ ಪುತ್ರ. ಮನೋಜ್ ಈಗ ನವೋದಯ ಶಾಲೆಯಲ್ಲಿ ಏಳನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಈಗಾಗಲೇ ರಾಜ್ಯ ಸರ್ಕಾರದಿಂದ ಹೊಯ್ಸಳ ಶೌರ್ಯ ಪ್ರಶಸ್ತಿಗೆ ಅವರು ಭಾಜನರಾಗಿದ್ದಾರೆ.

ಕಾರ್ಯಕ್ರಮದಲ್ಲಿ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀ ಪಿ.ಸಿ. ಶ್ರೀನಿವಾಸ, ಶ್ರೀ ಆನಂದ ಈಶ್ವರಪ್ಪ ಮುರಗೋಡ, ಶ್ರೀಮತಿ ಆಶಾ ಶ್ಯಾಮಸುಂದರ್, ಶ್ರೀ ಟಿ.ಪಿ. ಬೆಳ್ಳಿಯಪ್ಪ ಮತ್ತಿತರ ಸದಸ್ಯರು ಉಪಸ್ಥಿತರಿದ್ದರು.

**ಪ್ರಧಾನಿಯಿಂದ ಪಡೆದ ಪ್ರಶಸ್ತಿ**

ಮಾಸ್ಟರ್ ಮನೋಜ್ ಸೇರಿದಂತೆ ವಿವಿಧ ರಾಜ್ಯಗಳ 25 ಮಕ್ಕಳಿಗೆ ಪ್ರಧಾನ ಮಂತ್ರಿ ಡಾ. ಮನಮೋಹನ್ ಸಿಂಗ್ ಅವರು ಜನವರಿ 24ರಂದು ನವದೆಹಲಿಯಲ್ಲಿ ನಡೆದ ಸಮಾರಂಭವೊಂದರಲ್ಲಿ ಶೌರ್ಯ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಶಸ್ತಿ ಪುರಸ್ಕೃತರಲ್ಲಿ 9 ಬಾಲಕಿಯರು ಸೇರಿದ್ದಾರೆ. ಜೊತೆಗೆ 5 ಮಕ್ಕಳಿಗೆ ಮರಣೋತ್ತರವಾಗಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಧೈರ್ಯಶಾಲಿ ಮಕ್ಕಳಿಗೆ ಪ್ರಧಾನಮಂತ್ರಿಗಳು ಪ್ರಶಸ್ತಿಪತ್ರ, ನಗದು ಬಹುಮಾನ ಮತ್ತು ಪದಕವನ್ನು ನೀಡಿ ಸನ್ಮಾನಿಸಿದರು. ಶೌರ್ಯಪ್ರಶಸ್ತಿ ಪಡೆದ ಮಕ್ಕಳು ರಾಜಪಥದಲ್ಲಿ ನಡೆದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಿದರು.

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಪ್ರಧಾನಿ ಸಿಂಗ್ ಅವರು, ಮಕ್ಕಳ ಈ ಸಾಹಸ ಕಾರ್ಯ ಇತರರು ಒಳ್ಳೆಯ ಕೆಲಸಗಳನ್ನು ಮಾಡಲು ಪ್ರೇರೇಪಿಸುತ್ತದೆ. ಕಷ್ಟದಲ್ಲಿರುವವರಿಗೆ ನೆರವಾಗುವ ಗುಣವನ್ನು ಬೆಳೆಸುತ್ತದೆ ಎಂದರು. ಈ ಬಾರಿ ಪ್ರಶಸ್ತಿ ಪಡೆದವರಲ್ಲಿ 7 ವರ್ಷದ ತನ್ವಿ ಅತ್ಯಂತ ಕಿರಿಯ ಧೈರ್ಯಶಾಲಿ ಬಾಲಕಿ ಎನಿಸಿದ್ದಾಳೆ. ತನ್ವಿ ನೀರಿನಲ್ಲಿ ಮುಳುಗುತ್ತಿದ್ದ ತನ್ನ 4 ವರ್ಷದ ತಂಗಿಯನ್ನು ಕಾಪಾಡಿದ್ದಾಳೆ. ಹಿಮಾಚಲ ಪ್ರದೇಶದ ಶಿಲ್ಪಾ ಶರ್ಮ ಮಗುವೊಂದನ್ನು ಚಿರತೆ ಬಾಯಿಂದ ರಕ್ಷಿಸಿದ್ದಾಳೆ. ಮಹಾರಾಷ್ಟ್ರದ ಶುಭಂ ಬೆಂಕಿಯಿಂದ ಇಬ್ಬರು ಹುಡುಗಿಯರನ್ನು ರಕ್ಷಿಸಿದ್ದಾನೆ. ಅ

***ಆಶಾ ಶ್ಯಾಮಸುಂದರ್***

# ಪದ್ಮ ಪ್ರಶಸ್ತಿ ವಿಜೇತ ಕನ್ನಡಿಗರು

ಗಣರಾಜ್ಯೋತ್ಸವದ ಸಂದರ್ಭದಲ್ಲಿ 2014ನೇ ಸಾಲಿನ ಪದ್ಮ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದ್ದು, ಒಟ್ಟು 127 ಗಣ್ಯರು ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಪದ್ಮ ಪುರಸ್ಕಾರಗಳ ಪೈಕಿ ಅತ್ಯಂತ ಪ್ರತಿಷ್ಠಿತವಾದ ಪದ್ಮವಿಭೂಷಣ ಅಂತಾರಾಷ್ಟ್ರೀಯ ಖ್ಯಾತಿಯ ಯೋಗ ತಜ್ಞ, ಕನ್ನಡಿಗ ಬಿ.ಕೆ.ಎಸ್. ಅಯ್ಯಂಗಾರ್ ಮತ್ತು ಮಹಾರಾಷ್ಟ್ರ ಮೂಲದ ಡಾ.ರಘುನಾಥ್ ಮಶೇಲ್ಕರ್ ಅವರಿಗೆ ಘೋಷಿಸಲಾಗಿದೆ. ಜೊತೆಗೆ 24 ಜನರಿಗೆ ಪದ್ಮಭೂಷಣ ಮತ್ತು 101 ಜನರಿಗೆ ಪದ್ಮಶ್ರೀ ಪುರಸ್ಕಾರ ಘೋಷಿಸಲಾಗಿದೆ.

ಈ ಬಾರಿ ಕರ್ನಾಟಕದಲ್ಲಿ ಸೇವಾನಿರತರಾಗಿರುವ ವಿಜ್ಞಾನ ಮತ್ತು ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಇಂಡಿಯನ್ ಇನ್ಸ್‌ಟ್ಯೂಟ್ ಆಫ್ ಸಯನ್ಸ್‌ನ ಪದ್ಮನಾಭನ್ ಬಲರಾಮ್, ಕೃಷಿ ವಿಜ್ಞಾನಿ ಡಾ. ಮಾದಪ್ಪ ಮಹದೇವಪ್ಪ, ಇಸ್ರೋ ಮುಖ್ಯಸ್ಥ ಡಾ. ರಾಧಾಕೃಷ್ಣನ್ ಕೊಪ್ಪಿಲ್ ಅವರಿಗೆ ಪದ್ಮ ಭೂಷಣ ಗೌರವವನ್ನು ನೀಡಲಾಗಿದೆ. ಪದ್ಮಶ್ರೀ ಗೌರವ ಪ್ರಾಪ್ತರಾದ ಕರ್ನಾಟಕದವರೆಂದರೆ ಪ್ರೊ. ಎಳುವತಿಂಗಳ್ ದೇವಸಿ ಜೆಮ್ಮಿಸ್ (ವಿಜ್ಞಾನ ಮತ್ತು ಇಂಜಿನಿಯರಿಂಗ್), ಪ್ರಸೂತಿ ಶಿಶು ತಜ್ಞೆ ಡಾ. ಕಾಮಿನಿ ಎ. ರಾವ್ (ವೈದ್ಯಕೀಯ) ಮತ್ತು ಅಂಗವಿಕಲ ಕ್ರೀಡಾಪಟು ಎಚ್. ಬೊನಿಫೇಸ್ ಪ್ರಭು (ಕ್ರೀಡೆ–ಗಾಲಿಕುರ್ಚಿ ಟೆನ್ನಿಸ್).

ವಿಜ್ಞಾನ ಕ್ಷೇತ್ರದ ಸಾಧನೆಗಾಗಿ ಮುಂಬಯಿಯ ವಿಜ್ಞಾನಿ ಪ್ರೊ| ರಾಮಕೃಷ್ಣ ವಿಜಯಾಚಾರ್ಯ ಹೊಸೂರ ಅವರಿಗೆ ಮಹಾರಾಷ್ಟ್ರ ವಿಭಾಗದಲ್ಲಿ ಪದ್ಮಶ್ರೀ ಪ್ರಶಸ್ತಿ ಸಂದಿದೆ. ಇವರು ಮೂಲತಃ ಧಾರವಾಡದ ಮಾಳಮಡ್ಡಿಯವರು. ಧಾರವಾಡದಲ್ಲಿ ಶಾಲಾ–ಕಾಲೇಜು ಶಿಕ್ಷಣ ಮುಗಿಸಿ ಬಾಂಬೆ ಐಐಟಿಯಲ್ಲಿ ಎಂಜಿನಿಯರಿಂಗ್ ಪದವಿ, ಬಳಿಕ ಡಾಕ್ಟರೇಟ್ ಪಡೆದ ಇವರು 1978ರಿಂದ ಮುಂಬಯಿಯ ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಫಂಡಮೆಂಟಲ್ ರೀಸರ್ಚ್‌ನಲ್ಲಿ ಪ್ರಾಧ್ಯಾಪಕರು.

ಮಹಾರಾಷ್ಟ್ರ ವಿಭಾಗದಲ್ಲಿ ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾಗಿರುವ ಬಿ.ಕೆ.ಎಸ್. ಅಯ್ಯಂಗಾರ್ (ಬೆಳ್ಳೂರು ಕೃಷ್ಣಮಾಚಾರ್ ಸುಂದರರಾಜ ಅಯ್ಯಂಗಾರ್) ಮೂಲತಃ ಕರ್ನಾಟಕದ ಕೋಲಾರ ಜಿಲ್ಲೆಯ ಬೆಳ್ಳೂರಿನವರು. ಜಗತ್ತಿನ ಅತಿಶ್ರೇಷ್ಠ ಯೋಗಪಟು, ಯೋಗಗುರುವೆಂಬ ಹೆಗ್ಗಳಿಕೆ ಗಳಿಸಿದ್ದಾರೆ. 1991ರಲ್ಲಿ ಪದ್ಮಶ್ರೀ, 2002ರಲ್ಲಿ ಪದ್ಮಭೂಷಣ ಪಡೆದುಕೊಂಡಿದ್ದಾರೆ. ಅ

# ಬಹುರೂಪದ ಆಂಜನೇಯ ಶಕ್ತಿ

**ಡಾ. ಪುರುಷೋತ್ತಮ ಬಿಳಿಮಲೆ ಅವರ ‘ಬಹುರೂಪ’ ಕೃತಿ ಇತ್ತೀಚೆಗೆ ಪ್ರಕಟಗೊಂಡಿದೆ. ಅದರ ಮುನ್ನುಡಿಯನ್ನು ಹಿರಿಯ ವಿದ್ವಾಂಸ ಡಾ. ವಿವೇಕ ರೈ ಅವರು ಬರೆದಿದ್ದಾರೆ. ಕೃತಿಯ ಸಂಪೂರ್ಣ ಪರಿಚಯ ನೀಡುವ ಈ ಅಪೂರ್ವ ಬರಹ ಅಭಿಮತದ ಓದುಗರಿಗಾಗಿ.**

ಡಾ. ಪುರುಷೋತ್ತಮ ಬಿಳಿಮಲೆ ಅವರು ‘ವಿಜಯ ಕರ್ನಾಟಕ’ದಲ್ಲಿ ನಿಯತವಾಗಿ ಬರೆಯುತ್ತಿದ್ದ ಅಂಕಣ ಬರಹಗಳ ಸಂಕಲನ ‘ಬಹುರೂಪ’ಕ್ಕೆ ಮುನ್ನುಡಿಯನ್ನು ಬರೆಯುವ ಕೆಲಸ ಸಂತೋಷದ್ದು ಮತ್ತು ಸವಾಲಿನದ್ದೂ ಹೌದು. ನಾನು ಹಿಂದೆ ‘ಮುಂಗಾರು’ ಮತ್ತು ‘ಪ್ರಜಾವಾಣಿ’ ಪತ್ರಿಕೆಗಳಿಗೆ ಕೆಲವು ಕಾಲ ಅಂಕಣಬರಹ  ಬರೆದ ನನ್ನ ಅನುಭವ ಅಂತಹ ನಿಯತಕಾಲಿಕ ಬರವಣಿಗೆಗಳ ಸಂಕಷ್ಟವನ್ನು ನೆನಪು ಮಾಡಿಕೊಡುತ್ತದೆ. ಸಕಾಲಕ್ಕೆ ಬರಹವನ್ನು ಕೊಡುವುದರಿಂದ ತೊಡಗಿ, ನಿರ್ದಿಷ್ಟ ಪದಗಳ ಒಳಗೆ ಅದನ್ನು ಅಡಕಮಾಡುವುದರಿಂದ ಮುಂದುವರಿದು, ಪ್ರತೀ ಬಾರಿಯೂ ಹೊಸತಾಗಿ ಮತ್ತು ವಿಶಿಷ್ಟವಾಗಿ  ಹಾಗೂ ಓದುಗರಿಗೆ ನೇರವಾಗಿ ಸಂವಹನವಾಗಬಲ್ಲ ರೀತಿಯಲ್ಲಿ ಬರೆಯುವುದು ಬಲು ದೊಡ್ಡ ಸಾಹಸ. ಹಾಗಾಗಿ ಪತ್ರಿಕೆಗಳ ಅನೇಕ ಅಂಕಣಗಳು ವಿಷಯದ ಏಕತಾನತೆಯಿಂದ, ಹೊಸ ಒಳನೋಟಗಳ ಕೊರತೆಯಿಂದ, ಅನುಭವ ಮತ್ತು ಅಧ್ಯಯನಶೀಲತೆಯ ಮಿತಿಯಿಂದ, ಸಂವಹನಶೀಲತೆಯ ಬಿರುಕಿನಿಂದ ಬಳಲುತ್ತವೆ. ಆದರೆ ಡಾ. ಬಿಳಿಮಲೆ ಈ ಎಲ್ಲ ಸವಾಲುಗಳನ್ನು ಎದುರಿಸಿ ಅವುಗಳನ್ನು ಮೀರಿ, ಸುಮಾರು ಮೂರು ವರ್ಷಗಳ ಕಾಲ ಅವರ ಅಂಕಣವನ್ನು ಓದುಗರು ಸದಾ ಎದುರುನೋಡುವಂತೆ ಬರೆಯುತ್ತ ಬಂದಿದ್ದಾರೆ.


ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಪರಿಸರದ ಬಂಟಮಲೆ ಕಾಡಿನ ಬಳಿಯ ವಾಟೆಕಜೆ ಮನೆಯಲ್ಲಿ ಹುಟ್ಟಿ ಬೆಳೆದ ಪುರುಷೋತ್ತಮ ಮುಂದೆ ಬಿಳಿಮಲೆ, ಪಂಜ, ಸುಳ್ಯ, ಮಂಗಳೂರು, ಹಂಪಿಗಳಲ್ಲಿ ಕಲಿತು ಕಲಿಸಿ ಕಲೆತು ಕೊನೆಗೆ ದೆಹಲಿಗೆ ಬಂದಿದ್ದಾರೆ. ಹೀಗೆ ಹಳ್ಳಿಯಿಂದ ದಿಲ್ಲಿಗೆ ಮೆಟ್ಟಿಲುಗಳನ್ನು ಏರುತ್ತಾ ಸಾಗಿದ್ದಾರೆ. ಈಗ ದೆಹಲಿಯ ಅಂತಾರಾಷ್ಟ್ರೀಯ ಅಧ್ಯಯನ ಕೇಂದ್ರದಲ್ಲಿ ಕುಳಿತುಕೊಂಡು ಅಂಕಣಗಳನ್ನು ಬರೆಯುವಾಗ ಅವರ ನೆನಪುಗಳು ಅವರ ಹಳ್ಳಿಯಿಂದ ಆರಂಭವಾಗುತ್ತವೆ. ಬಾಲ್ಯದ ನೆನಪುಗಳನ್ನು ಮರುನೆನೆದುಕೊಳ್ಳುವ ಪ್ರಕ್ರಿಯೆಗೆ ಬಹಳ ಒಳ್ಳೆಯ ಅವಕಾಶವೆಂದರೆ ಅಂಕಣ ಬರಹ. ಅದು ಗತಕಾಲದ ಅನುಭವಗಳ ಕಥನದ ಮೂಲಕ ವರ್ತಮಾನ ಕಾಲಕ್ಕೆ ಪ್ರವೇಶಮಾಡಿ, ಒಂದು ಕ್ಷಣ ಬೆರಗನ್ನು ಮತ್ತು ವಿಷಾದವನ್ನು ಒಟ್ಟಿಗೇ ಪಡೆಯುವ ‘ಅಕ್ಷರ ಬಯಲಾಟ’. ಬಹಳ ಮಂದಿ ಹೊಸ ಮೆಟ್ಟಿಲುಗಳನ್ನು ಏರುತ್ತಾ ಹೋದ ಹಾಗೆ ಹಳೆಯ ಮೆಟ್ಟಿಲುಗಳನ್ನು ಮರೆತುಬಿಡುತ್ತಾರೆ, ಇಲ್ಲವೇ ಏರಿದ ಏಣಿಗಳನ್ನು ಕೆಳಕ್ಕೆ ತಳ್ಳಿಬಿಡುತ್ತಾರೆ. ಆದರೆ ಪುರುಷೋತ್ತಮ ಹಾಗೆ ಆಗಿಲ್ಲ ಎನ್ನುವುದೇ ಅವರ ವ್ಯಕ್ತಿತ್ವದ ಮತ್ತು ಬರವಣಿಗೆಯ ಅನನ್ಯತೆ.

ಬಿಳಿಮಲೆ ತಮ್ಮ ಅಂಕಣ ಬರಹಗಳನ್ನು ಐದು ವಿಭಾಗಗಳನ್ನಾಗಿ ವಿಂಗಡಿಸಿಕೊಂಡಿದ್ದಾರೆ. ಇದು ಕಾಲಾನುಕ್ರಮಣಿಕೆಯ ದೃಷ್ಟಿಯಿಂದ ಪುರುಷೋತ್ತಮರ ಬದುಕಿನ ಪಂಚಸ್ಥಲಗಳ ಹಾಗಿ ಕಾಣಿಸಿಕೊಳ್ಳುತ್ತದೆ. ಆದರೆ ಅವರು ಈ ಐದೂ ಸ್ಥಲಗಳಲ್ಲಿ ಇವತ್ತೂ ಜೀವಂತವಾಗಿದ್ದಾರೆ. ಅವರ ಬಾಲ್ಯದ ನೆನಪುಗಳ ಬರಹಗಳನ್ನು ಮತ್ತೆ ಮತ್ತೆ ಓದಿ ನಾನು ಸಂಭ್ರಮ ಪಟ್ಟಿದ್ದೇನೆ. ತಮ್ಮ  ಬಂಟಮಲೆ ಮನೆಯ  ಪಕ್ಕದ ಕಿರುತೊರೆ ಮತ್ತು ಅದರ ಸುತ್ತ ಇರುವ ಬಗೆಬಗೆಯ ಕಥನಗಳು ಮತ್ತು ಆ ಪರಿಸರದಲ್ಲಿ ಬೆರಗುಗಣ್ಣಿನಿಂದ ನೋಡಿದ ಯಕ್ಷಗಾನ ಆಟಗಳು–ಇವೆಲ್ಲ ಪುರುಷೋತ್ತಮ ಅವರ ಮನಸ್ಸಿನಲ್ಲಿ ದಟ್ಟವಾಗಿ ಅಚ್ಚೊತ್ತಿ, ಅವರು ರಾಚನಿಕವಾಗಿ ಗಂಗೆ ಯಮುನೆಯಂತಹ ದೊಡ್ಡ ನದಿಗಳ ಬಗ್ಗೆ ಮತ್ತು ಜಾಗತಿಕ ರಂಗಭೂಮಿಯ ಬಗ್ಗೆ ಕುತೂಹಲದಿಂದ ಚರ್ಚಿಸಲು ಅವಕಾಶ ಕಲ್ಪಿಸುತ್ತದೆ. ನಾವು ಇವತ್ತು ಹೇಳುವ ದೊಡ್ಡ ಶಬ್ದವಾದ ‘ಸಂಸ್ಕೃತಿ’ ಎನ್ನುವುದು ಕಿರುತೊರೆ, ಕಾಗೆ ಮುಟ್ಟಿದ ಕತೆ, ಇಲಿಗಳು, ಬಿದಿರಕ್ಕಿ, ಯಕ್ಷಗಾನ, ಅರೆಭಾಷೆ – ಇವುಗಳ ಮೂಲಕವೇ ಬೆಳೆಯುತ್ತ ಅನುಭವವೇದ್ಯವಾಗುತ್ತ ಬರುತ್ತದೆ. ನಾವು ಅಧ್ಯಯನ ಶಿಸ್ತು ಎಂದು ಭಾವಿಸುವ ‘ಜಾನಪದ’ ಆರಂಭವಾಗುವುದೇ ಕುಟ್ಟ ಬ್ಯಾರಿಯ ಪುಟ್ಟಕತೆ, ಚೌರಿಗರ ಕೃಷ್ಣಪ್ಪನ ಕೀಚಕ ವೇಷ, ಕಳಕೊಂಡ ನಾಲ್ಕಾಣೆ ಮತ್ತು ಯಕ್ಷಗಾನ – ಇಂತಹ ಬಾಲ್ಯದ ಅನುಭವಗಳ ಮೂಲಕ. ಹಾಗಾಗಿಯೇ ಎರಡನೆಯ ಭಾಗದ ಜಾನಪದ ಅಧ್ಯಯನದ ಬೇರುಗಳು ಮೊದಲನೆಯ ಹಂತದ ಬದುಕಿನ ಚೇಷ್ಟೆಗಳಲ್ಲಿವೆ.

ಪುರುಷೋತ್ತಮ ಅವರು ಸುಳ್ಯದ ನೆಹರೂ ಸ್ಮಾರಕ ಕಾಲೇಜಿನಲ್ಲಿ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ಅಧ್ಯಾಪಕರಾಗಿದ್ದಾಗ ಯಕ್ಷಗಾನ ಮತ್ತು ನಾಟಕಗಳಲ್ಲಿ ಪಾತ್ರ ಮಾಡುವ ಹುಮ್ಮಸ್ಸಿನ ಜೊತೆಗೆ ಬಂಡಾಯ ಸಂಘಟನೆಗಳಲ್ಲಿ ಸೈದ್ಧಾಂತಿಕವಾಗಿ ತೊಡಗಿಸಿಕೊಂಡಿದ್ದರು. ಈ ಮನೋಧರ್ಮ ಅವರ ಸುಪ್ತ ಪ್ರಜ್ಞೆಯಲ್ಲಿ ಬಾಲ್ಯದಿಂದಲೇ ಬಂದುದು ಎನ್ನುವುದು ಅವರ ‘ವಿದ್ಯೆಯಿಲ್ಲದ ಜಾತಕ ಮತ್ತು ನನ್ನ ಶಾಲೆ’ ಎಂಬ ಬರಹದಲ್ಲಿ ಸೂಚಿತವಾಗಿದೆ. ‘ಮನೆಮುರುಕರು ಮತ್ತು ಮಂಗಳೂರು ಮಲ್ಲಿಗೆ’ ಎಂಬ ಲೇಖನ ಈ ದೃಷ್ಟಿಯಿಂದ ಪ್ರಾದೇಶಿಕ ಸಂಸ್ಕೃತಿಯನ್ನು ನೋಡುವಂಥದ್ದು. ಕರಾವಳಿಯ ಮೂರು ಕೋಮುಗಳ ನಡುವಿನ

> **“ನಾಟಕಗಳಲ್ಲಿ ಪಾತ್ರ ಮಾಡುವ ಹುಮ್ಮಸ್ಸಿನ ಜೊತೆಗೆ ಬಂಡಾಯ ಸಂಘಟನೆಗಳಲ್ಲಿ ಸೈದ್ಧಾಂತಿಕವಾಗಿ ತೊಡಗಿಸಿಕೊಂಡಿದ್ದ ಮನೋಧರ್ಮ, ಸುಪ್ತ ಪ್ರಜ್ಞೆಯಲ್ಲಿ ಬಾಲ್ಯದಿಂದಲೇ ಬಂದುದು ಎನ್ನುವುದು ಅವರ ‘ವಿದ್ಯೆಯಿಲ್ಲದ ಜಾತಕ ಮತ್ತು ನನ್ನ ಶಾಲೆ’ ಎಂಬ ಬರಹದಲ್ಲಿ ಸೂಚಿತವಾಗಿದೆ.**





ಸಾಮರಸ್ಯವನ್ನು ಅವರು 'ಮಂಗಳೂರು ಮಲ್ಲಿಗೆ' ಯ ರೂಪಕದ ಮೂಲಕ ಹೇಳುವ ಬಗೆ ಮಾರ್ಮಿಕವಾದುದು –" ಕರಾವಳಿಯ ಪುಟ್ಟ ಮಂಗಳೂರು ಮಲ್ಲಿಗೆ ಎಲ್ಲೆಡೆಯು ಪ್ರಸಿದ್ಧ. ಅದನ್ನು ಒಂದು ಕೋಮಿನವರು ಬೆಳೆಸುತ್ತಾರೆ, ಇನ್ನೊಂದು ಕೋಮಿನವರು ಸಾಗಾಣಿಕೆ ಮಾಡುತ್ತಾರೆ, ಮತ್ತೊಂದು ಕೋಮಿನವರು ಮಾರಾಟ ಮಾಡುತ್ತಾರೆ. ಮಲ್ಲಿಗೆಯ ಪರಿಮಳ ಎಲ್ಲೆಡೆಯೂ ಪಸರಿಸಿಕೊಳ್ಳುತ್ತದೆ. ಈ ಅರ್ಥದಲ್ಲಿ ಮಂಗಳೂರು ಮಲ್ಲಿಗೆಯು ಕೋಮು ಸೌಹಾರ್ದತೆಗೊಂದು ಸಂಕೇತ. "

ಅರೆಭಾಷೆಯನ್ನು ಮಾತೃ ಭಾಷೆಯಾಗಿ ಉಳ್ಳ ಪುರುಷೋತ್ತಮ ಪರಿಸರದ ಭಾಷೆ ತುಳುವಿನ ಬಗ್ಗೆ ನಡೆಸಿದ ಅಧ್ಯಯನ ಮತ್ತು ಪ್ರಕಟಿಸಿದ ಕಾಳಜಿ ಅಪೂರ್ವವಾದುದು. 'ತುಳು ಭಾಷೆಗೆ ಸಂವಿಧಾನದ ಮಾನ್ಯತೆ' ಎನ್ನುವ ಲೇಖನದಲ್ಲಿ ತುಳುಭಾಷೆಯ ಶಕ್ತಿಯನ್ನೂ ತುಳುವರ ದೌರ್ಬಲ್ಯವನ್ನೂ ಒಟ್ಟಿಗೆ ಅನಾವರಣ ಮಾಡುತ್ತಾರೆ. ಬಾಲ್ಯದಿಂದಲೇ ಯಕ್ಷಗಾನಕ್ಕೆ ತೆರೆದುಕೊಂಡ ಅವರು ಅದರ ಮಯಾಲೋಕವನ್ನೂ ವಾಸ್ತವ ಜಗತ್ತನ್ನೂ ಸೂಕ್ಷ್ಮವಾಗಿ ಗ್ರಹಿಸಿಕೊಂಡ ಬರಹಗಳು ಇಲ್ಲಿವೆ. ತಾಳಮದ್ದಲೆಯ ಭಾಷಾಲೋಕ ಮತ್ತು ತುಳು ಯಕ್ಷಗಾನದ ದೇಸಿಲೋಕ ಇವೆರಡನ್ನೂ ಸಾಮಾಜಿಕವಾಗಿ ವಿವರಿಸುವ ಕ್ರಮ ವಿಶಿಷ್ಟವಾದುದು.

'ಬಹುರೂಪ' ದ ಎರಡನೆಯ ಭಾಗದಲ್ಲಿ ಬಿಳಿಮಲೆ ತಮ್ಮ ಊರು ಮತ್ತು ಜಿಲ್ಲೆಗಳನ್ನು ಮೀರಿ ಕರ್ನಾಟಕದ ವ್ಯಾಪ್ತಿಗೆ ಬರುತ್ತಾರೆ. ಕನ್ನಡ ಭಾಷೆ ಮತ್ತು ಕರ್ನಾಟಕದ ಜಾನಪದದ ಬಹುರೂಪಗಳು ಇಲ್ಲಿ ತೆರೆದುಕೊಳ್ಳುತ್ತವೆ. 'ಕನ್ನಡ ಭಾಷೆಗೆ ರಾಷ್ಟ್ರೀಯ ಮತ್ತು ಜಾಗತಿಕ ಮನ್ನಣೆ' ಎನ್ನುವ ಲೇಖನದಲ್ಲಿ ಕರ್ನಾಟಕದ ರಾಜಕೀಯ ಮತ್ತು ಆಡಳಿತದ ವ್ಯಕ್ತಿಗಳ ನಿರಾಸಕ್ತಿ ಹೇಗೆ ಕನ್ನಡಕ್ಕೆ ರಾಷ್ಟ್ರೀಯ ಮನ್ನಣೆ ದೊರೆಯಲು ಅಡ್ಡಿಯಾಗಿದೆ ಎನ್ನುವ ವಿವರಗಳು ದೊರೆಯುತ್ತವೆ. 'ಕನ್ನಡ ದೇಸಿ ಅಂದರೆ ನೀರುಳ್ಳಿ' ಎನ್ನುವ ಬರಹ ಒಂದು ರೂಪಕವಾಗಿ ಕನ್ನಡ ಸಂಸ್ಕೃತಿಯ ಗ್ರಹಿಕೆಯ ಬಹುಬಗೆಯ ನೋಟಗಳನ್ನು ಧ್ವನಿಸುತ್ತದೆ. ಹೀಗೆ ಹೇಳುವಾಗಲೇ ಬಹುಧರ್ಮಗಳ ಸಂಕೀರ್ಣ ರೂಪವೇ ಕನ್ನಡ ಸಂಸ್ಕೃತಿ ಎನ್ನುವ ಧ್ವನಿ ಗಟ್ಟಿಯಾಗಿದೆ. ನೀರುಳ್ಳಿಯನ್ನು ಸುಲಿಯುತ್ತ ಬಂದು ಕೊನೆಗೆ ಏನೂ ಉಳಿಯದ ಸ್ಥಿತಿ ಬರುವ ಹಾಗೆ ಕರ್ನಾಟಕದ ಸಂಸ್ಕೃತಿಯಿಂದ ತಮಗೆ ಒಪ್ಪಿಗೆಯಾಗದ ಅಂಶಗಳನ್ನು ತಿರಸ್ಕರಿಸುವ ಅಪಾಯವನ್ನು ಇಲ್ಲಿ ಮಾರ್ಮಿಕವಾಗಿ ಸೂಚಿಸಲಾಗಿದೆ. ಕರ್ನಾಟಕದ ಜಾನಪದ ಅಧ್ಯಯನ, ಕರ್ನಾಟಕದ ಜಾತ್ರೆಗಳು, ಪುರಾಣಗಳು, ಕಲೆಗಳು – ಇವುಗಳನ್ನು ಕುರಿತ ಇಲ್ಲಿನ ಬರಹಗಳು

**"ಬಿಳಿಮಲೆ ಅವರು ದೆಹಲಿಯಲ್ಲಿ ಕುಳಿತುಕೊಂಡು ಕರ್ನಾಟಕವನ್ನು ಮತ್ತು ಭಾರತವನ್ನು ನೋಡುತ್ತಾರೆ. ದೇಶದ ರಾಜಧಾನಿಯಾದ ದೆಹಲಿಯು ಅಧಿಕಾರದ ಕೇಂದ್ರವಾಗಿ ಮಾತ್ರವಲ್ಲದೆ, ರಾಜ್ಯಗಳ ಗುರುತುಗಳಿಗೆ ಬಯಲು ಆಗುವ ಇತಿಹಾಸದ ವಿವರಗಳನ್ನು ಕೊಡುತ್ತಾರೆ**

ಕಿರಿದರೊಳ್ ಪಿರಿದರ್ಥವನ್ನು ಹೇಳುವ ಮಾದರಿಯವು. ಕುಮ್ಮಟ ದುರ್ಗ, ಮೈಲಾರಲಿಂಗ ಜಾತ್ರೆ, ಕಳಸದ ಕತೆ, ಲಿಖಿತ ಪುರಾಣಗಳು ಮತ್ತು ಜನಪದ ಪುರಾಣಗಳು, ಕನ್ನಡ ಪಂಚಭೂತಗಳು, ಕರ್ನಾಟಕದ ಐತಿಹ್ಯಗಳು–ಹೀಗೆ ಕರ್ನಾಟಕ ಜಾನಪದದ ಒಂದೊಂದು ವಿಷಯವೂ ಇಲ್ಲಿ ಸಂಕ್ಷಿಪ್ತವಾಗಿ ಚರ್ಚೆಗೆ ಒಳಗಾಗಿದೆ. ಕ್ಷೇತ್ರಕಾರ್ಯದ ಮಾಹಿತಿಯನ್ನು, ಜಾನಪದ ಅಧ್ಯಯನದ ಒಳನೋಟವನ್ನು ಮತ್ತು ಸಾಂಸ್ಕೃತಿಕ ಪ್ರವಾಸದ ಸೂಚನೆಯನ್ನು ಒಟ್ಟಿಗೆ ಕೊಡುವ ಸಮನ್ವಯದ ಮಾದರಿಯಲ್ಲಿ ಇಲ್ಲಿನ ಬರಹಗಳು ಇವೆ. 'ಕರ್ನಾಟಕ ಜನಪದ ಕಲೆಗಳಿಗೆ ಯುನೆಸ್ಕೋ ಮನ್ನಣೆ ಏಕಿಲ್ಲ' ಎಂಬ ಲೇಖನದ ರಚನೆಯು ಕನ್ನಡ ಭಾಷೆಗೆ ರಾಷ್ಟ್ರೀಯ ಮನ್ನಣೆ ಏಕಿಲ್ಲ ಎನ್ನುವ ಮಾದರಿಯದ್ದು. ಕೇರಳದಂತಹ ರಾಜ್ಯದ ಜೊತೆಗೆ ಹೋಲಿಸಿಕೊಂಡು ಜಾಗತಿಕ ಮಟ್ಟದಲ್ಲಿ ಕರ್ನಾಟಕವು ಗೈರುಹಾಜರಾಗುವುದಕ್ಕೆ ಇರುವ ರಾಜಕೀಯ ಕಾರಣಗಳನ್ನು ತುಂಬಾ ನೇರವಾಗಿ ಇಲ್ಲಿ ಪ್ರಸ್ತಾವಿಸಲಾಗಿದೆ. ಪ್ರಾದೇಶಿಕ ಪಕ್ಷಗಳು ಎನ್ನುವ ಹೆಸರಿನಲ್ಲಿ ಕರ್ನಾಟಕದಲ್ಲಿ ಮತ್ತು ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಈಗ ನಡೆಯುತ್ತಿರುವ ಹೊಂದಾಣಿಕೆಯ ರಾಜಕೀಯ ಹೇಗೆ 'ಪ್ರಾದೇಶಿಕತೆ' ಎನ್ನುವ ಪರಿಕಲ್ಪನೆಗೆ ಅವಹೇಳನ ಎನ್ನುವ ಸಂಗತಿಯನ್ನು ಸಮರ್ಪಕ ವಿವರಗಳೊಂದಿಗೆ ಚರ್ಚಿಸಲಾಗಿದೆ.

ಈ ಗ್ರಂಥದ ಮೂರನೆಯ ಭಾಗದಲ್ಲಿ ಬಿಳಿಮಲೆ ಅವರು ದೆಹಲಿಯಲ್ಲಿ ಕುಳಿತುಕೊಂಡು ಕರ್ನಾಟಕವನ್ನು ಮತ್ತು ಭಾರತವನ್ನು ನೋಡುತ್ತಾರೆ . ದೇಶದ ರಾಜಧಾನಿಯಾದ ದೆಹಲಿಯು ಅಧಿಕಾರದ ಕೇಂದ್ರವಾಗಿ ಮಾತ್ರವಲ್ಲದೆ, ರಾಜ್ಯಗಳ ಗುರುತುಗಳಿಗೆ ಬಯಲು ಆಗುವ ಇತಿಹಾಸದ ವಿವರಗಳನ್ನು ಕೊಡುತ್ತಾರೆ. ಹಾಗಾಗಿ ಕನ್ನಡದ ಗುರುತು, ಕನ್ನಡಿಗರ ವಲಸೆ, ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕನ್ನಡ, ಗಡಿ ದಾಟಿದ ಯಕ್ಷಗಾನ – ಇವೆಲ್ಲವನ್ನು ರಾಷ್ಟ್ರೀಯತೆಯ ಸಂಕೀರ್ಣ ಪರಿಕಲ್ಪನೆಯ ಒಳಗೆ ನೋಡುವ ದೃಷ್ಟಿಕೋನ ಕಾಣಿಸುತ್ತದೆ. ಸ್ಥಳೀಯತೆ ಮತ್ತು ಪ್ರಾದೇಶಿಕತೆಗಳು ತಮ್ಮ ಅನನ್ಯತೆಗಳನ್ನು ಉಳಿಸಿಕೊಂಡು ರಾಷ್ಟ್ರೀಯತೆಯ ಒಳಗೆ ಕ್ರಿಯಾಶೀಲ ಆಗುವುದು ಬಹಳ ಮುಖ್ಯವಾದುದು. ಆದ್ದರಿಂದಲೇ ರಾಷ್ಟ್ರೀಯ ದೃಷ್ಟಿಕೋನ ಎನ್ನುವುದು ಬಂಟಮಲೆ ಬಿಳಿಮಲೆ ಪಂಜ ಸುಳ್ಯ ತುಳುನಾಡು ಮತ್ತು ಕರ್ನಾಟಕ – ಇವನ್ನು ಬಿಟ್ಟು ಬೇರೆಯಾಗಿ ಇರಲು ಸಾಧ್ಯವಿಲ್ಲ.

'ಬಹುರೂಪ' ದ ನಾಲ್ಕನೆಯ ಭಾಗದಲ್ಲಿ ಪುರಾಣ, ಇತಿಹಾಸ ಮತ್ತು ವರ್ತಮಾನಗಳನ್ನು ಮುಖಾಮುಖಿ ಮಾಡಿ ನದಿಗಳು, ಕ್ಷೇತ್ರಗಳು ಮತ್ತು ಪುರಾಣಕತೆಗಳನ್ನು ವಿವರಿಸಲಾಗಿದೆ.

ಸಿಂಧೂ, ಗಂಗೆ, ಯಮುನೆ, ಸರಸ್ವತಿ ನದಿಗಳ ಸಂಕಥನಗಳು ಬಹುಮುಖಿ ಸಾಮಗ್ರಿಗಳ ವಿವೇಚನೆಯ ಮೂಲಕ ತುಂಬಾ ಮಹತ್ವದ್ದಾಗಿವೆ. ಈ ನಾಲ್ಕು ನದಿಗಳ ಪುರಾಣ, ಇತಿಹಾಸ ಮತ್ತು ವರ್ತಮಾನವನ್ನು ಬಿಳಿಮಲೆ ತಮ್ಮ ವ್ಯಾಪಕ ಅಧ್ಯಯನ ಮತ್ತು ಲವಲವಿಕೆಯ ಕ್ಷೇತ್ರಕಾರ್ಯದ ಮೂಲಕ ಹೊಸ ಪುರಾಣ ಕತೆಗಳಂತೆ ಕಟ್ಟಿಕೊಟ್ಟಿದ್ದಾರೆ. ಅವರಿಗೆ 'ಕತೆ' ಎನ್ನುವ ಪದ ಬಹಳ ಇಷ್ಟವಾದುದು – ಗಂಗೆಯ ಕತೆ, ಹನುಮಂತನ ಕತೆ, ಹಲವು ಮಹಾಭಾರತಗಳ ಕತೆ, ಮಧ್ಯಕಾಲೀನ ಭಾರತದ ಪ್ರೇಮಕತೆಗಳು – ಹೀಗೆ ನದಿ, ದೇವತೆ ಮತ್ತು ಪುರಾಣ ಸಂಬಂಧಿ ಕತೆಗಳು ಇಲ್ಲಿ ಬಹು ಪದರಗಳ ಜೋಡಣೆಯಿಂದ ಕಥನಗಳಾಗಿವೆ. ಮಥುರಾ, ವಾರಣಾಸಿ ಮತ್ತು ಕುರುಕ್ಷೇತ್ರಗಳ ಪುರಾಣ, ಇತಿಹಾಸ ಮತ್ತು ವರ್ತಮಾನಗಳ ವೈರುಧ್ಯಗಳು ಮತ್ತು ರೂಪಾಂತರಗೊಂಡ ಬಗೆಗಳು ಇಲ್ಲಿ ಜಾಹೀರು ಗೊಂಡಿವೆ. ಹಾಗಾಗಿಯೇ ಅವರ ದೃಷ್ಟಿಯಲ್ಲಿ ಮಥುರೆಯಲ್ಲಿ ಕೃಷ್ಣ ಮಾರಾಟದ ವಸ್ತುವಾದರೆ, ಕುರೂಪಗೊಂಡದ್ದು ಕುರುಕ್ಷೇತ್ರ ಮತ್ತು ಬೆಳಕಿಲ್ಲದ ನಗರ ವಾರಣಾಸಿ. ಸಾಂಸ್ಥಿಕ ಧರ್ಮಗಳು ವ್ಯಾಪಾರೀ ಧರ್ಮಗಳಾಗುವ ಅಪಮೌಲ್ಯದ ಕತೆಗಳು ಇಲ್ಲಿನ ಬರಹಗಳು.

'ಬಹುರೂಪ'ದ ಕೊನೆಯ ಭಾಗದ ಲೇಖನಗಳು ವಿಶ್ವದ ಹರಹಿನಲ್ಲಿ ಬಿಳಿಮಲೆ ಕಂಡದ್ದು ಮತ್ತು ಕೇಳಿದ್ದು. ಜಪಾನಿನಲ್ಲಿ ಕಂಡ ಆಚರಣೆಗಳು ಮತ್ತು ಕೇಳಿದ ಕತೆಗಳು ಅವರಿಗೆ ಅವರ ಬಾಲ್ಯವನ್ನು ನೆನಪಿಸುತ್ತವೆ. ಜಾಗತಿಕ ಸಂಸ್ಕೃತಿಯನ್ನು ಸ್ಥಳೀಯ ಸಂಸ್ಕೃತಿಯ ಜೊತೆಗೆ ಮುಖಾಮುಖಿಯಾಗಿಸಿ ನೋಡುವ ಕ್ರಮವೇ ಸಂಸ್ಕೃತಿ ಅಧ್ಯಯನದ ತೌಲನಿಕ ಮಾದರಿಯದ್ದು. ಗ್ಲೋಬಲ್ ಮತ್ತು ಲೋಕಲ್‌ಗಳನ್ನು ಎದುರುಬದುರು ಇರಿಸಿದಾಗ ಗ್ಲೋಬಲ್‌ನ್ನು ಲೋಕಲ್ ಮೂಲಕ ನೋಡುವ ಕ್ರಮವನ್ನು 'ಗ್ಲೋಕಲ್' ಎಂದು ಕರೆಯಬಹುದು. ಜಪಾನಿನ ಸೃಷ್ಟಿಪುರಾಣದ ಜಿಗಣೆಗಳು ಬಂಟಮಲೆಯ ಜಿಗಣೆಗಳನ್ನು, ಜಪಾನಿನ 'ಕಮಿ' ತುಳುನಾಡಿನ 'ಕುಲೆ' ಗಳನ್ನು ನೆನಪಿಸುವ ಮೂಲಕ ವಿಶ್ವಾತ್ಮಕ ಸಂಸ್ಕೃತಿ ನಿರ್ಮಾಣದ ಸಮಾನ ಆಸಕ್ತಿಯನ್ನು ಪ್ರಕಟಿಸುತ್ತದೆ. ಸೂರ್ಯನನ್ನು ಹೆಣ್ಣು ಎನ್ನುವ ಜಪಾನಿ ಪುರಾಣ ಭಾರತೀಯ ಪುರಾಣಗಳಿಗಿಂತ ಭಿನ್ನವಾಗಿ ತಾಯಿಯ ಸೃಷ್ಟಿಯ ಕಲ್ಪನೆಯನ್ನು ಕೊಡುತ್ತದೆ. 'ದೇಹ ಮತ್ತು ಸಂಸ್ಕೃತಿ' ತುಂಬಾ ಅಪೂರ್ವ ಒಳನೋಟಗಳನ್ನು ಉಳ್ಳ ಲೇಖನ. ಯಕ್ಷಗಾನದಂತಹ ನಮ್ಮ ರಂಗಕಲೆಗಳು ದೇಹದ ಕೆಳಭಾಗವನ್ನು ಹಿಂಭಾಗವನ್ನು ಮತ್ತು ಎಡಭಾಗವನ್ನು ನಿರ್ಲಕ್ಷ್ಯ ಮಾಡಿರುವುದರ ಹಿಂದಿನ ತಾತ್ವಿಕತೆಯ ಪೂರ್ವಗ್ರಹವನ್ನು ಸೂಕ್ಷ್ಮವಾಗಿ ಗುರುತಿಸಿದ್ದಾರೆ. ಅನಾಟಮಿ, ಕಲಾರೂಪ ಮತ್ತು ನಮ್ಮ ತಾತ್ತ್ವಿಕತೆಗಳ ನಡುವಿನ ಅಂತರ್ ಸಂಬಂಧವನ್ನು ಅಧ್ಯಯನ ಮಾಡಲು ಈ ಪುಟ್ಟ ಲೇಖನ ಉತ್ತಮ ಮಾರ್ಗದರ್ಶಿಯಾಗಿದೆ.

ಡಾ. ಪುರುಷೋತ್ತಮ ಬಿಳಿಮಲೆ ತುಂಬಾ ಸಂಕೀರ್ಣವಾದ ಸಂಗತಿಗಳನ್ನು ತಮ್ಮ ಅಂಕಣ ಬರಹಗಳಲ್ಲಿ ಬಿಡಿಬಿಡಿಯಾಗಿ ಚರ್ಚಿಸುತ್ತಾರೆ. ನಿಜವಾದ ಅರ್ಥದಲ್ಲಿ ಇಡೀ ಪುಸ್ತಕದ ಎಲ್ಲ ಬರಹಗಳು ಕೆಲವು ಮುಖ್ಯ ತಾತ್ವಿಕತೆಗಳ ಅಭಿವ್ಯಕ್ತಿಯ ಭಿನ್ನ ರೂಪಗಳು. ಅವನ್ನೆಲ್ಲ ಒಂದುಗೂಡಿಸಿದಾಗ ರಾಷ್ಟ್ರೀಯತೆ ಪ್ರಾದೇಶಿಕತೆ ಮತ್ತು ಸ್ಥಳೀಯತೆಗಳ ಸಂಬಂಧ, ಧರ್ಮ ಮತ ಜಾತಿ ಮತ್ತು ಭಾಷೆಗಳ ಸಂಬಂಧ, ಸಾಹಿತ್ಯ ಜಾನಪದ ಮತ್ತು ಕಲೆಗಳ ಸಂಬಂಧ – ಹೀಗೆ ಅನೇಕ ಪರಿಮಾಣಗಳ ಮೂಲಕ ಪುನಾರಚನೆ ಮಾಡಬಹುದು.

ಸ್ಥಳೀಯತೆಯ ಸಂಸ್ಕೃತಿ ಮತ್ತು ಬದುಕಿನ ಆರಂಭದ ದಿನಗಳ ಅನುಭವದ ಮೂಲಕ ನಾಡನ್ನು ದೇಶವನ್ನು ಮತ್ತು ವಿಶ್ವವನ್ನು ಕಾಣುವ ದೃಷ್ಟಿಕೋನ; ಮೌಖಿಕ ಸಂಸ್ಕೃತಿಯನ್ನು ತಳದಲ್ಲಿ ಮತ್ತು ಕೇಂದ್ರದಲ್ಲಿ ಇಟ್ಟುಕೊಂಡು ಅದರ ಮೂಲಕ ಪುರಾಣ ಮತ್ತು ಶಿಷ್ಟಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವುದು; ಯಕ್ಷಗಾನ ರಂಗಭೂಮಿಯ ಆಕೃತಿಯ ಮೂಲಕ ರಾಷ್ಟ್ರೀಯ ಮತ್ತು ವಿಶ್ವದ ರಂಗಭೂಮಿ ಕಲೆಗಳನ್ನು ಅಭ್ಯಾಸಮಾಡುವುದು; ಭಾಷೆ ಮತ್ತು ನಾಡಿನ ಅನನ್ಯತೆಯನ್ನು ಸ್ಥಾಪಿಸಲು ನಿರ್ದಿಷ್ಟ ಯೋಜನೆಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದು; ಜಾತೀಯತೆ ಮತ್ತು ಕೋಮುವಾದಗಳು ಜನಪದ ಸಂಸ್ಕೃತಿಯ ಮೇಲೆ ನಡೆಸುತ್ತಿರುವ ಧಾಳಿಯನ್ನು ಸಂಸ್ಕೃತಿಯ ಒಳಗಿನಿಂದಲೇ ಪ್ರತಿರೋಧಿಸುವುದು; ಪರಂಪರೆಯ ಸಂಸ್ಕೃತಿಯನ್ನು ಗಲೀಜುಮಾಡುವ ಆಧುನಿಕತೆಯ ಹುನ್ನಾರಗಳನ್ನು ಬಯಲುಮಾಡುವುದು – ಇವೆಲ್ಲವನ್ನೂ ತಾಳಮದ್ದಲೆಯ ಅರ್ಥಗಾರಿಕೆಯಂತೆ ಹರಿಕತೆಯ ಪ್ರವಚನದಂತೆ ತುಂಬ ಆಪ್ತವಾಗಿ ಸ್ವಾರಸ್ಯಕರವಾಗಿ ಅನುಭವ ಕಥನ ಮತ್ತು ಗ್ರಂಥ ಪಠನಗಳ ಉಪಕತೆಗಳೊಂದಿಗೆ ಓದುಗರ ಜೊತೆಗೆ ಹಂಚಿಕೊಳ್ಳುವುದು. ಇದು 'ಬಿಳಿಮಲೆ ಬಹುರೂಪ' ದ ಆಂಜನೇಯ ಶಕ್ತಿ. ಅ

***ಡಾ. ಬಿ.ಎ. ವಿವೇಕ ರೈ***


ಕರ್ನಾಟಕ ಸರ್ಕಾರ ವಾರ್ತಾ ಇಲಾಖೆ, ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿ ಹಾಗೂ ದೆಹಲಿ ಕರ್ನಾಟಕ ಸಂಘ, ನವದೆಹಲಿ
ಇವರ ಸಂಯುಕ್ತ ಆಶ್ರಯದಲ್ಲಿ

**ತುಳು ಚಲನಚಿತ್ರ ಪ್ರದರ್ಶನ**

16.02.2014 ಭಾನುವಾರ

ಅಪರಾಹ್ನ : 2 ಗಂಟೆಗೆ




ನೀವೂ ಬನ್ನಿ, ನಿಮ್ಮ ಕುಟುಂಬದವರು ಮತ್ತು ಸ್ನೇಹಿತರನ್ನೂ ಕರೆತನ್ನಿ!

**ಎಲ್ಲರಿಗೂ ಆದರದ ಸ್ವಾಗತ**

**ಸ್ಥಳ: ದೆಹಲಿ ಕರ್ನಾಟಕ ಸಂಘದ ಸಭಾಂಗಣ, ರಾವ್ ತುಲಾರಾಂ ಮಾರ್ಗ್, ಸೆಕ್ಟರ್–12, ಆರ್.ಕೆ. ಪುರಂ, ನವದೆಹಲಿ– 110022**

ವಸಂತ ಶೆಟ್ಟಿ ಬೆಳ್ಳಾರೆ
ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ, ನವದೆಹಲಿ

ಗಿರೀಶ್ ಎಲ್.ಪಿ.
ಉಪ ನಿರ್ದೇಶಕರು, ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿ

# ದೂರ ತೀರದ ಅನಿಸಿಕೆಗಳು

**ದೆಹಲಿಯ ಸರಹದ್ದಿನ ನಗರ ಗುರ್‌ಗಾಂವ್‌ನಲ್ಲಿ ತನ್ನ ವೃತ್ತಿ ಬದುಕಿನ ನಿಮಿತ್ತ ಬಂದ** *ಸತೀಶ್ ಬಸವಾರಾಧ್ಯ* **ಅವರು ಉತ್ತರ ಭಾರತದ ಈ 'ಹಳ್ಳಿನಗರ'ದ ಬದುಕಿನ ಚಿತ್ರಣವನ್ನು ಅಭಿಮತದ ಓದುಗರಿಗೆ ನೀಡುತ್ತಿದ್ದಾರೆ.**

ಪ್ರೇಮಾಂಕುರದ ಮೊದಲರ್ದದಲ್ಲೆ ಒಲ್ಲೆ ಎಂದು, ದೂರ ಸರಿದ ನಲ್ಲೆಯ ನಲ್ಮೆಯ ನಗುವಿನ ಮೊಗವನ್ನು ಮರೆಯಲೆಂದು ನಾನು 1998ರಲ್ಲಿ ಬೆಂಗಳೂರು ಬಿಟ್ಟು ಸ್ವರ್ಣ ಜಯಂತಿ ರೈಲಿನಲ್ಲಿ ಮಿತ್ರನ ಜೊತೆ ನವದೆಹಲಿ ತಲುಪಿದೆ. ಕುಶಲಕರ್ಮಿಯಾದ ನಾನು, ಪ್ರತಿಷ್ಠಿತ ದ್ವಿಚಕ್ರ ವಾಹನ ಸಂಸ್ಥೆಯೊಂದರಲ್ಲಿ ಕೆಲಸ ಪ್ರಾರಂಭಿಸಿದೆ.

ಬೆಂಗಳೂರು ಮಹಾನಗರದ ಸುಸಜ್ಜಿತ ಬಸ್ಸುಗಳು, ರಸ್ತೆಗಳು, ಹೋಟೇಲುಗಳು, ಸುಸಂಸ್ಕೃತ ಕನ್ನಡಿಗರು, ಪ್ರೀತಿಯ ತಂದೆ–ತಾಯಿ, ಅಕ್ಕ–ಅಣ್ಣ ಇವರಿಂದ ದೂರವಾಗಿ, ಇವರೆಲ್ಲರ ಪ್ರೀತಿಯನ್ನು ಮರೆಯಲಾಗದೇ ಸಾವಿರಾರು ಮೈಲು ದೂರ ಅನ್ಯ ಭಾಷಿಕರ ನಡುವೆ ಬದುಕಿನ ಪಯಣ ಕಟ್ಟಿಕೊಂಡೆ.

ನವದೆಹಲಿಯಿಂದ 30 ಕಿಲೋ ಮೀಟರ್ ದೂರದ ಹರ್ಯಾಣ ರಾಜ್ಯದ ಗುರ್‌ಗಾಂವ್‌ನಲ್ಲಿ ನಾನು ನೆಲೆಯೂರಿದೆ. ಎಲ್ಲೆಲ್ಲೂ ಕಾಣುವ ಸೈಕಲ್ ರಿಕ್ಷಾಗಳು, ಒಣರೊಟ್ಟಿ ನೀಡುವ ಡಾಭಾಗಳು, ರಸ್ತೆಯಲ್ಲೆ ಟೀ ತಯಾರಿಸುವ ಟೀ ಅಂಗಡಿಗಳು, ಬಿಸಿಲ ಬೇಯ್ಗೆಗೆ ಟಾರ್ ಕರಗಿ ಕಿತ್ತೋಗಿರುವ ರಸ್ತೆಗಳು, ಪ್ಲಾಸ್ಟರ್ ಇಲ್ಲದ ಮನೆಗಳು, ಬಾಡಿಗೆ ಮನೆಯಂತೆ ಕಾಣುವ ಮಂದಿರಗಳು, ಬಾಯಿತುಂಬ ಪಾನ್ ಜಿಗಿದು ಮಂತ್ರ ಪಠಿಸೊ ಪಂಡಿತರು, ಭಗವಂತ ಬೇಡವೆಂದರು ಹಾಲು–ನೀರು ಸುರಿವ ಭಕ್ತಾದಿಗಳು, ಮಾರಮ್ಮನ ಜಾತ್ರೆಯಲ್ಲಿ ಸಿಗುವ ಬೊಂಬೆಯಂತೆ ಕಾಣುವ ಕನ್ಯಾಮಣಿಗಳು, ಮುಖ ಮುಚ್ಚಿ ಬೇರೆಲ್ಲಾ ಕಾಣುವಂತೆ ನಡೆದಾಡುವ ಆಂಟೀಮಣಿಗಳು, ದಿನವಿಡೀ ಕಾರ್ಡ್ಸ್ ಆಡುತ್ತಾ ಹುಕ್ಕ ಸೇದುವ ಮುದುಕರು, ಮೂಲೆಯಲ್ಲಿ ಬೀಡಿ ಕುಡಿಯುವ ಅಜ್ಜಿಗಳು, ಸಾಲಿ ಆದಾ ಗರ್‌ವಾಲಿ(ನಾದಿನಿ ಅರ್ಧ ಹೆಂಡತಿ) ಎನ್ನುವ ಗಂಡಸರು, ಅತ್ತಿಗೆ ಜೊತೆ ಬಣ್ಣದಾಟ (ಹೋಳಿ) ವಾಡುವ ಮೈದುನರು, ವರ್ಷವಿಡೀ ರೊಟ್ಟಿ ತಿಂದು, ಹಬ್ಬ–ಹರಿದಿನಗಳಂದು ಅನ್ನ ತಿನ್ನುವ, ಈ ಬಿಳೀ ಜನಗಳ ನಡುವೆ, ಲುಂಗಿ ತೊಟ್ಟು ಕಪ್ಪು ಮುಖದಲ್ಲಿ ಅಣ್ಣಮ್ಮನ ಕುಂಕುಮವಿಡುವ ನನ್ನನ್ನು ಮದರಾಸಿ, ಕಾಳು (ಕರಿಯ) ಅಂತ ಕರೆಯುವಾಗ, ಬೆಂಗಳೂರು ಕರಗದ ಖಡ್ಗದಿಂದ ಇವರುಗಳ ಕತ್ತು ಕತ್ತರಿಸುವಷ್ಟು ಕೋಪ ಬರುತ್ತಿತ್ತು.

ಹಿಂದಿ ಮಾಧ್ಯಮವಿರುವುದರಿಂದ ಇವರುಗಳಿಗೆ ಇಂಗ್ಲೀಷ್ ಕಬ್ಬಿಣದ ಕಡಲೆ, ಅರ್ಜಿ ಬರೆಯಬೇಕಾದರೆ ಮಾತ್ರ ನನ್ನ ಹಿಂದೆ ಬೀಳುವ, ಈ ಒರಟು ಜನಗಳನ್ನು ಬಹುಬೇಗ ಅಟ್ಟಕ್ಕೆ ಏರಿಸಬಹುದು, ಸದಾ ಬೈಗುಳದಿಂದಲೇ ಮಾತು ಪ್ರಾರಂಭಿಸುವ ಇವರುಗಳು ಬಾವಿಯೊಳಗಿನ ಕಪ್ಪೆಗಳಿದ್ದಂತೆ.

ಕಬ್ಬಿನಿಂದ ಸಂಪೂರ್ಣ ರಸ ಹೊರ ತೆಗೆಯುವಂತೆ ನಮ್ಮ ಸಂಸ್ಥೆ ಕೂಡಾ ನಮ್ಮಿಂದ ಕೆಲಸ ಮಾಡಿಸುತ್ತಿತ್ತು. ಬಿಸಿರಕ್ತ, ಚಿಮ್ಮುವ ಯೌವನದಿಂದಾಗಿ ನಾಲ್ಕಾರು ವರ್ಷಗಳು ಉರುಳಿದ್ದು ತಿಳಿಯಲಿಲ್ಲ. ಹೀಗೊಂದು ದಿನ ಇಲ್ಲಿ ಕನ್ನಡಿಗರ ಸಂಘವಿದೆ ಎಂದು ಸಂಪರ್ಕಿಸಿದಾಗ ತಿಳಿಯಿತು. ಅದು ಹಳ್ಳಿಮನೆಯಂತೆ, ಮನೆಯಂಗಳದಲ್ಲಿ ನಡೆಯುವ ಕನ್ನಡ ಸಂಘವೆಂದು.

ನಾವು ಅವರೊಂದಿಗೆ ಬೆರೆತು, ಇತರೆ ಕನ್ನಡಿಗರನ್ನು ಸೇರಿಸಿ 2002ರಲ್ಲಿ ಗುರ್‌ಗಾಂವ್ ಕನ್ನಡ ಸಂಘವನ್ನು ಪುನರಾರಂಭಿಸಿದೆವು. ಈಗ ಸದ್ಯದಲ್ಲಿ 300 ಕುಟುಂಬಗಳು ನೆಲೆಸಿರುವ ಇಲ್ಲಿ ಐಟಿ–ಬಿಟಿಯ ಪ್ರಭಾವದಿಂದ ನಗರ ವೇಗವಾಗಿ ಬೆಳೆಯುತ್ತಿದೆ. ಸಿಟಿಬಸ್, ಸಿಟಿ ಟ್ಯಾಕ್ಸಿ, ಮತ್ತು ಆಟೋಗಳು ಈಗಷ್ಟೆ ಪ್ರಾರಂಭವಾಗಿವೆ.

ಕೇಂದ್ರ ಸರ್ಕಾರ ಗುರ್‌ಗಾಂವ್ ನಗರವನ್ನು ರಾಷ್ಟ್ರ ರಾಜಧಾನಿಯ ಸರಹದ್ದು ಎಂದು ಘೋಷಿಸಿರುವುದರಿಂದ ಮತ್ತು 2011 ರ ಕಾಮನ್‌ವೆಲ್ತ್ ಗೇಮ್ಸ್‌ಗಾಗಿ ತರಾತುರಿಯಿಂದ ನಗರವನ್ನು ಅಭಿವೃದ್ಧಿ ಪಡಿಸಲಾಯಿತು.

**ಬಿಸಿರಕ್ತ, ಚಿಮ್ಮುವ ಯೌವನದಿಂದಾಗಿ ನಾಲ್ಕಾರು ವರ್ಷಗಳು ಉರುಳಿದ್ದು ತಿಳಿಯಲಿಲ್ಲ. ಹೀಗೊಂದು ದಿನ ಇಲ್ಲಿ ಕನ್ನಡಿಗರ ಸಂಘವಿದೆ ಎಂದು ಸಂಪರ್ಕಿಸಿದಾಗ ತಿಳಿಯಿತು. ಅದು ಹಳ್ಳಿಮನೆಯಂತೆ, ಮನೆಯಂಗಳದಲ್ಲಿ ನಡೆಯುವ ಕನ್ನಡ ಸಂಘವೆಂದು.**

ಈ ಅಭಿವೃದ್ಧಿಯಿಂದ ಮತ್ತೊಂದು ಸಮಸ್ಯೆ ಉದ್ಭವಿಸಿತು. ಇಲ್ಲಿನ ರೈತರಿಗೆ ಕೋಟಿ–ಕೋಟಿ ಹಣ ನೀಡಿ, ಇವರ ಜಮೀನನ್ನು ಗೃಹ ಸಮುಚ್ಛಯಗಳನ್ನು ನಿರ್ಮಿಸುವ ಸಂಸ್ಥೆಗಳ ಉದ್ಯಮಿಗಳು ಖರೀದಿಸಿದ್ದಾರೆ. ಆದರೆ ಕೋಟಿ ಪಡೆದ ರೈತರಿಗೆ ಮುಂದೇನು ಎಂದು ಅರಿಯದಾಗಿದೆ. ಕೆಲವು ರೈತ ಯುವಕರು ಬೆಲೆಬಾಳುವ ವಾಹನಗಳನ್ನು ಖರೀದಿಸಿ ಮೋಜು–ಮಸ್ತಿ ಮಾಡುವುದು, ರಾತ್ರಿ ವೇಳೆ ಹುಡುಗಿಯರನ್ನು ಬಲವಂತವಾಗಿ ಎಳೆದೊಯ್ಯುವುದು, ಹಣಕ್ಕಾಗಿ ಸಿಕ್ಕ ಸಿಕ್ಕವರನ್ನು ಲೂಟಿ ಮಾಡುವುದು, ಸಣ್ಣ ಸಣ್ಣ ಕಾರಣಗಳಿಗಾಗಿ ಗುಂಡಿನ ದಾಳಿ ನಡೆಯುತ್ತಿದೆ. ಇಲ್ಲಿನ ಪೋಲೀಸ್ ವ್ಯವಸ್ಥೆ ನಿದ್ರಾವಸ್ಥೆಯಲ್ಲಿದೆ. ಮಾಧ್ಯಮಗಳ ಪ್ರಭಾವ ಲವಲೇಶವೂ ಇಲ್ಲ.

ಹೊರ ರಾಜ್ಯಗಳಿಂದ ಲಕ್ಷಾಂತರ ಜನರು ಇಲ್ಲಿನ ಕಾರ್ಖಾನೆಗಳಲ್ಲಿ, ಆಸ್ಪತ್ರೆಗಳಲ್ಲಿ, ಐಟಿ–ಬಿಟಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಗಳು, ಆಸ್ಪತ್ರೆಗಳು ಇಲ್ಲಿ ವ್ಯಾಪಾರೀಕರಣಗೊಂಡಿವೆ, ಮಧ್ಯಮ ವರ್ಗದವರ ಸ್ಥಿತಿ ದಹನೀಯವಾಗಿದೆ, ಇನ್ನು ಬಡವರ ಪಾಡು ಲೆಕ್ಕಕ್ಕಿಲ್ಲವಾಗಿದೆ. ಅಭಿವೃದ್ಧಿಯ ನಾಗಾಲೋಟಕ್ಕೆ ಇಲ್ಲಿನ ಸಂಸ್ಕೃತಿ ಕೊಚ್ಚಿ ಹೋಗಿದೆ. ಇಲ್ಲಿ ನಾವು ನಮ್ಮ ಸಂಸ್ಕೃತಿಯನ್ನು ಬಿಡಲಾಗದೆ, ಇಲ್ಲಿನ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಲಾಗದೆ ತಿಣುಕಾಡುತ್ತಿದ್ದೇವೆ.

ದೂರ ತೀರದ ವಿಹಂಗಮ ನೋಟದ ಅರಿವಿಲ್ಲದೆ ನನ್ನಂತ ಅನೇಕರು ಯಾವುದೋ ಪರಿಸ್ಥಿತಿಗಳ ಒತ್ತಡದಿಂದ ಎಲ್ಲವನ್ನು ಅದುಮಿಕೊಂಡು ಭಂಡಬಾಳು ಬಾಳುತ್ತಿದ್ದಾರೆ. ದೂರ ತೀರದ ಪಯಣ ಸಾಕಾಗಿದೆ, ಆದರೂ ವಿಧಿಯಿಲ್ಲದೆ ಸಾಗುತ್ತಿದ್ದೇನೆ.. .

ಎಂತ ಪ್ರೇಮದ ಪಯಣವಿದು ದೂರ ತೀರದ ಕತೆಯಿದು. ಅ

***ಸತೀಶ್ ಬಸವಾರಾಧ್ಯ***



## ಸಾಹಿತಿಗಳನ್ನು ಚುಕ್ಕಿಯಲ್ಲಿ ಸೆರೆ ಹಿಡಿದ ಕಲಾವಿದರು

ಅಪ್ರತಿಮ ಪ್ರತಿಭೆಯನ್ನು ಹೊಂದಿ ಕಲೆಯನ್ನು ಅಭ್ಯಸಿಸುತ್ತಿರುವ ಶಿವಮೊಗ್ಗದ ರಮ್ಯಾ ಮತ್ತು ಮನೋಜ್ ದೆಹಲಿ ಮತ್ತು ಉತ್ತರ ಭಾರತದ ಕೆಲವು ಪಟ್ಟಣಗಳಲ್ಲಿ ಮಕ್ಕಳಿಗೆ ಚಿತ್ರಕಲಾ ತರಬೇತಿಯನ್ನು ನೀಡುತ್ತಿದ್ದಾರೆ. ಕಳೆದ ವರ್ಷ ರಾಜ್ಯೋತ್ಸವದ ಸಂದರ್ಭದಲ್ಲಿ ಅವರು ಕನ್ನಡದ ಜ್ಞಾನಪೀಠ ಪುರಸ್ಕೃತ ಎಂಟು ಸಾಹಿತಿಗಳ ಭಾವಚಿತ್ರವನ್ನು ಬಹಳಷ್ಟು ಶ್ರಮ ವಹಿಸಿ ಚುಕ್ಕಿಗಳಲ್ಲಿ ರಚಿಸಿದರು. ಕುವೆಂಪು, ದ.ರಾ.ಬೇಂದ್ರೆ, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ವಿ.ಕೃ. ಗೋಕಾಕ್, ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ್ ಅವರ ಭಾವಚಿತ್ರವನ್ನು ಚುಕ್ಕಿ ಚಿತ್ರದಲ್ಲಿ ಮೂಡಿಸಿ ತಮ್ಮ ಕಲಾ ಕೌಶಲ್ಯವನ್ನು ಪ್ರದರ್ಶಿಸಿದರು.

ಒಂಭತ್ತು ಮತ್ತು ಹತ್ತನೇ ತರಗತಿಯಲ್ಲಿ ಕಲಿಯುತ್ತಿರುವ ಮನೋಜ್ ಮತ್ತು ರಮ್ಯಾ, ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ದಾಸರಕೇರಿಯ ಶಶಿಕುಮಾರ್ ಮತ್ತು ನಾಗರತ್ನ ದಂಪತಿಗಳ ಮಕ್ಕಳು.

ಚಿತ್ರಕಲಾ ಶಿಕ್ಷಕ ಡಿ.ಆರ್. ಚಂದ್ರಶೇಖರ ಅವರಲ್ಲಿ ತರಬೇತಿ ಪಡೆಯುತ್ತಿರುವ ಅವರು ಜಿಲ್ಲಾಮಟ್ಟ, ರಾಜ್ಯಮಟ್ಟದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಕಲಾಪ್ರತಿಭೋತ್ಸವದಲ್ಲಿ ಭಾಗವಹಿಸಿದ್ದಾರೆ. ದೆಹಲಿಯಲ್ಲಿ ಪ್ರತಿವರ್ಷ ಏಪ್ರಿಲ್, ಮೇನಲ್ಲಿ ಅರವಿಂದ ಆಶ್ರಮ, ಮದರ್ ಇಂಟರ್‌ನ್ಯಾಶನಲ್ ಸ್ಕೂಲ್ ಹಾಗೂ ನೈನಿತಾಲ್, ರಾಮ್‌ಘಡ್‌ನಲ್ಲಿ ಕರ್ನಾಟಕದಿಂದ ಬಂದು ಮಕ್ಕಳಿಗೆ ಚಿತ್ರಕಲಾ ತರಬೇತಿ ನೀಡುತ್ತಿದ್ದಾರೆ. ಅ

*ಡಿ.ಆರ್. ಚಂದ್ರಶೇಖರ*

## ವಿ.ಪಿ. ಬಳಿಗಾರ್ ಅವರು ಕಾರ್ಯದರ್ಶಿ ಹುದ್ದೆಗೆ ಭಡ್ತಿ



ಕೇಂದ್ರ ಸರಕಾರದ ಸೇವೆಯಲ್ಲಿರುವ ರಾಜ್ಯದ ಹಿರಿಯ ಐಎಎಸ್ ಅಧಿಕಾರಿ ಶ್ರೀ ವಿ.ಪಿ. ಬಳಿಗಾರ್ ಅವರಿಗೆ ಸರಕಾರದ ಕಾರ್ಯದರ್ಶಿ ಮಟ್ಟದ ಹುದ್ದೆಗೆ ಭಡ್ತಿಯಾಗಿದೆ. ಸದ್ಯಕ್ಕೆ 'ಹುಡ್ಕೊ'ದಲ್ಲಿ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿರುವ ಶ್ರೀ ಬಳಿಗಾರ್ ಅವರು ಇದೇ ಹುದ್ದೆಯಲ್ಲಿ ಮುಂದುವರಿಯಲಿದ್ದು, ಏಪ್ರಿಲ್ ಬಳಿಕ ಹೊಸ ಹುದ್ದೆಯನ್ನು ವಹಿಸುವರು. ಅ

## ಮಾಲಾ ಹೊನ್ನತ್ತಿ ಮುಂಬಯಿ ಮ್ಯಾರಥಾನ್‌ನಲ್ಲಿ ಪ್ರಥಮ

ಖ್ಯಾತ ಅಡ್ವೆಂಚರ್ ಕ್ರೀಡಾಪಟು ಈ ಸಲದ ದೆಹಲಿ ಕರ್ನಾಟಕ ಸಂಘದ ವಿಶಿಷ್ಟ ಕನ್ನಡಿಗ ಪ್ರಶಸ್ತಿ ವಿಜೇತೆ ಶ್ರೀಮತಿ ಮಾಲಾ ಹೊನ್ನತ್ತಿ ಅವರು ಜನವರಿ 19ರಂದು ಮುಂಬಯಿಯಲ್ಲಿ ನಡೆದ ಮ್ಯಾರಥಾನ್ ಓಟದಲ್ಲಿ 60 ವರ್ಷ ಮತ್ತು ಮೇಲ್ಪಟ್ಟ ಸೂಪರ್ ವೆಟರನ್ ವಿಮೆನ್ ವಿಭಾಗದಲ್ಲಿ ಪ್ರಥಮ ಸ್ಥಾನಗಳಿಸಿದರು. ಅ



## ಏಕ್ತಾ ಮೂರ್ತಿಗೆ ಬ್ಯಾಡ್ ಮಿಂಟನ್‌ನಲ್ಲಿ ಪ್ರಥಮ ಸ್ಥಾನ

ದೆಹಲಿ ಸರಕಾರವು ಡಿಸೆಂಬರ್‌ನಲ್ಲಿ ನಡೆಸಿದ ಅಂತರ್ ವಲಯ ಬ್ಯಾಡ್‌ಮಿಂಟನ್ ಟೂರ್ನಮೆಂಟ್‌ನಲ್ಲಿ ಕುಮಾರಿ ಏಕ್ತಾ ಮೂರ್ತಿಯು 19 ವರ್ಷ ವಯಸ್ಸಿಗಿಂತ ಕೆಳಗಿನ ಹುಡುಗಿಯರ ಪಂದ್ಯದಲ್ಲಿ ಪ್ರಥಮ ಸ್ಥಾನ ಪಡೆದರು. ಅವರು ಕಾರ್ಮೆಲ್ ಕಾನ್ವೆಂಟ್ ಶಾಲೆಯನ್ನು ಪ್ರತಿನಿಧಿಸಿದರು. ಅ



## ಶ್ರದ್ಧಾಂಜಲಿ ಯಶವಂತ ಹಳಿಬಂಡಿ

ವರಕವಿ ದ.ರಾ.ಬೇಂದ್ರೆ ಅವರ 'ಪಾತರಗಿತ್ತಿ ಪಕ್ಕ ನೋಡಿದೇನ ಅಕ್ಕ. . .' ಹಾಡಿನ ಮೂಲಕ ಖ್ಯಾತಿ ಪಡೆದಿದ್ದ ಸುಗಮ ಸಂಗೀತ ಗಾಯಕ ಯಶವಂತ ಹಳಿಬಂಡಿ ಅವರು ಇದೇ ಜನವರಿ 22ರಂದು ಹೃದಯಾಘಾತದಿಂದ ನಿಧನರಾದರು. ದೆಹಲಿ ಕರ್ನಾಟಕ ಸಂಘದಲ್ಲಿ ಹಲವಾರು ಕಾರ್ಯಕ್ರಮವನ್ನು ನೀಡಿದ ಅವರು ಸಂಘದ ಸಾಂಸ್ಕೃತಿಕ ಸಮುಚ್ಚಯದ ಉದ್ಘಾಟನಾ ಸಮಾರಂಭದಲ್ಲಿ ಕೂಡಾ ಕಾರ್ಯಕ್ರಮವನ್ನು ನೀಡಿದ್ದಾರೆ. ದೆಹಲಿಯಲ್ಲಿ ಬಿ.ಕೆ. ಸುಮಿತ್ರಾ ಮತ್ತು ತಂಡದೊಂದಿಗೆ ಸಂಗೀತ ತರಬೇತಿಯನ್ನು ನೀಡಿ ಇಲ್ಲಿನ ಕನ್ನಡಿಗರೊಂದಿಗೆ ಮತ್ತು ದೆಹಲಿ ಕರ್ನಾಟಕ ಸಂಘದೊಂದಿಗೆ ಸಕ್ರಿಯರಾಗಿದ್ದರು. ಸಂಘದ ವತಿಯಿಂದ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು ಅ

## ಡಾ. ಎಂ. ವೀರಪ್ಪ ಮೊಯಿಲಿ ಅವರಿಗೆ ಪಂಡಿತ್ ಹರಿದತ್ತ ಶರ್ಮ ಪುರಸ್ಕಾರ

ಉಪರಾಷ್ಟ್ರಪತಿ ಶ್ರೀ ಮೊಹಮ್ಮದ್ ಹಮೀದ್ ಅನ್ಸಾರಿ ಅವರು ನವದೆಹಲಿಯಲ್ಲಿ ಇದೇ ಜನವರಿ 22ರಂದು ಕೇಂದ್ರೀಯ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಹಾಗೂ ಪರಿಸರ ಮತ್ತು ಅರಣ್ಯ ಸಚಿವ ಡಾ. ಎಂ. ವೀರಪ್ಪ ಮೊಯಿಲಿ ಅವರಿಗೆ ಪಂಡಿತ್ ಹರಿದತ್ತ ಶರ್ಮ ಪುರಸ್ಕಾರವನ್ನು ನೀಡಿ ಗೌರವಿಸಿದರು. ಅ





# ಹೊಸ ಬಣ್ಣದ ಹೊಸ ಹೂವು

ದಟ್ಟ ಅರಣ್ಯದಲ್ಲಿ ನಡೆಯುವಾಗ ಕೇಳಿ ಬರುವ ಹಕ್ಕಿಯ ಕೂಗು. ನೀರಿನ ಹರಿಯುವಿಕೆಯ ಝುಳು ಝುಳು ಸ್ವರ. ಎತ್ತರದ ಮರಗಳ ನಡುವಿನಿಂದ ಕೆಳಗೆ ಹರಿದು ಬರುವ ಬಿಸಿಲಿನ ಕೋಲು. ಎದುರು ನೋಡಿದರೆ ಇನ್ನು ಕಾಣದಷ್ಟು ದಟ್ಟವಿರುವ ಕತ್ತಲೆ. ಯಾವುದೋ ಮರದಿಂದ ಕೆಳಗೆ ಬೀಳುತ್ತಿರುವ ಹಣ್ಣುಗಳು. ಮರವನ್ನು ಸುತ್ತಿ ಹತ್ತುವ ಬಳ್ಳಿಗಳಲ್ಲಿ ಅರಳಿದ ಹೂಗಳ ಪರಿಮಳ. ನಡೆಯುವಾಗ ಕಾಲಿಗೆ ಸಿಕ್ಕಿದ ಪೊದರಿನಲ್ಲಿ ನಾವೆಂದೂ ಕಾಣದಿದ್ದ ಮತ್ತೊಂದು ಹೊಸ ಬಣ್ಣದ ಹೊಸ ಹೂವು.

ನಮ್ಮ ತಾಣದತ್ತ ನಡೆಯುತ್ತಾ ನಾವು ಹೋಗುವಾಗ ಪ್ರತಿಯೊಂದು ಕೂಗಿಗೂ ಅರ್ಥ ನೀಡುವ ಹಕ್ಕಿ, ನೀರಿನ ಹರಿಯುವಿಕೆಯ ಝುಳಪು, ಮರದಲ್ಲಿ ಬೆಳೆದ ಹಣ್ಣು, ತನ್ನಷ್ಟಕ್ಕೇ ಅರಳಿ ಪರಿಮಳ ಬೀರಿ ಉದುರಿದ ಹೂಗಳು ಕಾಣುವುದಿಲ್ಲ, ಕೇಳುವುದಿಲ್ಲ. ಆ ಸುಂದರ ಅರಣ್ಯದ ತುಂಬಾ ತುಂಬಿರುವ ಅದೆಷ್ಟೋ ಕೌತುಕಗಳನ್ನು ಒಂದು ಕ್ಷಣ ನಿಂತು ನೋಡುವಷ್ಟು ತಾಳ್ಮೆಯಾಗಲೀ ವ್ಯವಧಾನವಾಗಲೀ ನಮ್ಮಲಿಲ್ಲ. ನಾವು ನಡೆಯುವ ದಾರಿಯೇ ಮುಖ್ಯ ನಮಗೆ. ನಾವು ತಲುಪಬೇಕಾದ ತಾಣದ್ದೇ ನಮಗೆ ಧ್ಯಾನ.

ಒಂದು ಸಲ ಸ್ವಲ್ಪ ಹೊತ್ತು ಅಲ್ಲಿರುವ ಕೌತುಕಗಳನ್ನು ನೋಡಿದರೆ, ನಡೆದು ಬಂದ ದಣಿವು ಮರೆಯಾಗುವುದು. ಮುಂದಿನ ದಾರಿಗೆ ಹೊಸದೊಂದು ಅರ್ಥವನ್ನು ಕಲ್ಪಿಸುತ್ತಾ ಹೆಜ್ಜೆಗಳು ಹಗುರವಾಗುವುದು.

ಹಿಂದಿನಿಂದಲೂ ದೆಹಲಿ ಕರ್ನಾಟಕ ಸಂಘ, ದೆಹಲಿಯಲ್ಲಿರುವ ಅದೆಷ್ಟೋ ಎಲೆಮರೆಯಲ್ಲಿದ್ದ ಪ್ರತಿಭೆಗಳಿಗೆ ವೇದಿಕೆಯಾಗಿದೆ. ಜತೆಗೆ, ಅಭಿಮತದ ಪುಟಗಳ ಮೂಲಕ ಪರಿಚಯದ ಸಂಪರ್ಕ ಬೆಳೆಸಿದೆ. ಹಿಂದಿನಂತೆ, ಮುಂದಿನ ದಿನಗಳಲ್ಲೂ ಹೊಸ ಹೊಸ ಪ್ರತಿಭೆಗಳನ್ನು ಹುಡುಕಿ ಅವುಗಳಿಗೊಂದು ವೇದಿಕೆಯಾಗುವಂತೆ ಮಾಡುವ ಪ್ರಯತ್ನ ನಡೆಯುತ್ತಿದೆ.

ಹೊಸತನ್ನು ಕಾಣಲು ನಮ್ಮ ಕಣ್ಣುಗಳನ್ನು ತೆರೆದಿಟ್ಟು ಕೊಳ್ಳೋಣ. ಅ

*ಬಾಲಕೃಷ್ಣ ನಾಯ್ಕ್ ಡಿ.*

# ಓದುಗರ ಪತ್ರ

ಅಭಿಮತದ ಡಿಸೆಂಬರ್ ಸಂಚಿಕೆ ಕಣ್ಮನ ಸೂರೆಗೊಳಿಸುವಂತೆ ಕಂಗೊಳಿಸಿತು. ಅವಿದ್ಯಾವಂತೆಯಾಗಿದ್ದರೂ ಬೌದ್ಧಿಕ ಚಿಂತನೆಗೆ ಒತ್ತು ನೀಡಿರುವ ನಾಡೋಜ ಸಾಲುಮರದ ತಿಮ್ಮಕ್ಕ ಹಾಗೂ ಯಕ್ಷಗಾನ ಕ್ಷೇತ್ರಕ್ಕೆ ಅಪೂರ್ವರೆನ್ನಿಸಿದ ಗುರುಶ್ರೀ ಬನ್ನಂಜೆ ಸಂಜೀವ ಸುವರ್ಣರನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಡಾ. ಶಿವರಾಮ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದನೆ ಸಲ್ಲಿಸಿದ ವರದಿ ಮತ್ತು ವಿನ್ಯಾಸ ಆಕರ್ಷಿಸಿತು. ಸುಂದರ ಮುಖಪುಟ ಮತ್ತು ಒಳಪುಟಗಳಲ್ಲಿ ಅಚ್ಚುಕಟ್ಟಾಗಿ ದಾಖಲಾದ ನಿರೂಪಣೆ ವಿಶೇಷವೆನಿಸಿತು. ಪ್ರತಿ ಪುಟಗಳು ಸ್ಫುಟವಾದ ಅಕ್ಷರಗಳಿಂದ ಮತ್ತು ವರ್ಣರಂಜಿತ ಆಕರ್ಷಕ ಚಿತ್ರಗಳಿಂದ ಓದಿದಷ್ಟು ಮತ್ತೊಮ್ಮೆ ಓದಬೇಕೆಂದು ಒತ್ತಾಯಿಸುತ್ತಿದೆ. ಅಭಿನಂದನೆಗಳು. ಅ

***ಕೀರಿಕ್ಕಾಡು ವನಮಾಲಾ ಕೇಶವಭಟ್ಟ***
***ಕಾಸರಗೋಡು***

ಜನವರಿ ತಿಂಗಳ ಅಭಿಮತ ಓದಿದೆ. ಇತ್ತೀಚೆಗೆ ಅದು ಹೊಸ ಉಡುಪಿನೊಂದಿಗೆ ಬರುತ್ತದೆ. ಅಭಿನಂದನೆಗಳು.

ಪತ್ರಿಕೆಯಲ್ಲಿ ಪ್ರಕಟವಾಗುವ ಭಾವಚಿತ್ರಗಳ ಸಣ್ಣ ನಿರೂಪಣೆ ಕೊಟ್ಟರೆ ಒಳ್ಳೆಯದು.

'ದೆಹಲಿ ಕರ್ನಾಟಕ ಸಂಘದ ಅಭಿಮತ' ಇನ್ನೂ ಅಭಿವೃದ್ಧಿಯಾಗಲಿ ಎಂದು ಆಶಿಸುತ್ತೇನೆ. ಅ

***ಪ.ವೆಂ. ನಾಯಕ್, ನವದೆಹಲಿ***




'ದೆಹಲಿ ಕರ್ನಾಟಕ ಸಂಘದ ಅಭಿಮತ' ಸಂಘದ ಸದಸ್ಯರಿಗೆ ಸಂಘದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳ ಮತ್ತು ಬೆಳವಣಿಗೆಗಳ ಕುರಿತು ಮಾಹಿತಿ ನೀಡಲು ಪ್ರಕಟವಾಗುತ್ತಿದೆ. ಅಲ್ಲದೇ ಸ್ಥಳೀಯ ಬರಹಗಾರರಿಗೆ ತಮ್ಮ ಸಾಹಿತ್ಯಿಕ ರಚನೆಗಳನ್ನು ಪ್ರಕಟಿಸಲೂ ಒಂದು ವೇದಿಕೆಯಾಗಿದೆ. ಅಭಿಮತದ ಕುರಿತಾದ ನಿಮ್ಮ ಸಲಹೆಗಳಿಗೆ ಸ್ವಾಗತ. ನಿಮ್ಮ ಬರಹಗಳನ್ನು ದೆಹಲಿ ಕರ್ನಾಟಕ ಸಂಘಕ್ಕೆ ಇಮೇಲ್ ಮೂಲಕ ಕಳುಹಿಸಬಹುದು.
**(dksangha@gmail.com)**

ಓದುಗರ ಪತ್ರಗಳನ್ನೂ ಇದೇ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬಹುದು. ಅ

***ಸಂಪಾದಕ ಮಂಡಳಿ***


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING

C-95, Okhla Industrial Area
Phase-I, New Delhi – 110 020

PHONE:
011-40520770


MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
February - 2014, Price Rs.1/- RNI Regn. No. 53405/91, DL-SW-1/4016/13-15
Printout Date : February 8th / 9th, Postal Date :10th / 11th, Total Pages-20

A PURAVANKARA Company

PROVIDENT™




OWN A HOME WITH SUPERIOR FEATURES IN BANGALORE.
FROM JUST RS. 32 LAC* ONWARDS.

**Provident Welworth City**
Yelahanka Doddaballapur Road
Ready-to-occupy **3BHK: Rs. 32 Lac***
1201 Apartments handed over

**Provident Sunworth**
Near Mysore Road-NICE Junction
**2BHK: Rs. 33 Lac* 3BHK: Rs. 40 Lac***
Construction in full swing by L&T Construction

*Including car park & clubhouse. Conditions apply. Statutory fees and government levies are extra.

Provident Sunworth and Welworth City are financed by ICICI Bank Ltd. & ICICI HFC Ltd.

**Landline: 080 4400 4400 Mobile: +91 81308 60877**

www.providenthousing.com | sales@providenthousing.com | CREDAI BENGALURU

SANKALP

BANGALORE | CHENNAI | COIMBATORE | MANGALORE

Editor: Balakrishna Naik D., Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770